ವಿ. ಟಿ. ಕಾಳೆ

V.T. Kale



ಡಾ. ಎಸ್.ಸಿ. ಪಾಟೀಲ

Dr. S.C. Patil

ವ್ಹಿ.ಟಿ. ಕಾಳೆ

V.T. Kale

ಪೀಟರ್ ಲೂಯಿಸ್
ಪ್ರಧಾನ ಸಂಪಾದಕರು

ಡಾ|| ಎಸ್.ಸಿ. ಪಾಟೀಲ
ಲೇಖಕರು

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

V.T. KALE - A Monograph by Dr. S.C. Patil, Reader and Head of the Department of Painting and Sculpture, Kannada University, Hampi, P.G. Dept., Banashankari, Badami - 587201 and Published by Shri B.T. Munirajaiah, Registrar, Karnataka Lalithakala Academy, Kannada Bhavana, J.C. Road, Bangalore - 560 002. Tel. : 080-22480297

© : Author
First Edition : 2004

Translated by **Sri B.T. Soma Prabhu**

Pages : **48 + 8**

Price : **Rs. 40-00**

ಪೀಟರ್ ಲೂಯಿಸ್
ಅಧ್ಯಕ್ಷರು / ಪ್ರಧಾನ ಸಂಪಾದಕರು

ಡಾ॥ ಅ.ಲ. ನರಸಿಂಹನ್
ಮಾಲಿಕೆಯ ಸಂಪಾದಕರು

ಶ್ರೀ ಬಿ.ಟಿ. ಮುನಿರಾಜಯ್ಯ
ಪ್ರಕಾಶಕರು / ರಿಜಿಸ್ಟ್ರಾರ್

ಸಂಪಾದಕ ಮಂಡಳಿ
ಶ್ರೀ ದಿಲೀಪ ಕುಮಾರ ಕಾಳೆ
ಶ್ರೀ ಬಿ.ಎನ್. ದೇಸಾಯಿ
ಶ್ರೀ ಪಿ.ಎಸ್. ಕಡೇಮನಿ
ಡಾ. ಪೂರ್ಣಿಮಾ ಪಾಟೀಲ್
ಶ್ರೀ ಸುರೇಶ ಹಾಲಭಾವಿ

ಶ್ರೀ ಪ.ಸ. ಕುಮಾರ್
ಪ್ರಕಟಣೆಯ ಸಮನ್ವಯಕಾರರು

ಮುಖಚಿತ್ರ : **ವಿ.ಟಿ. ಕಾಳೆ ಅವರ ಕಲಾಕೃತಿ "ದಿವಾ"**
ಮುಖಚಿತ್ರ ವಿನ್ಯಾಸ : **ಶ್ರೀ ಸುಧಾಕರ ದರ್ಬೆ**

ಮುದ್ರಕರು
ಇಳಾ ಪ್ರಿಂಟರ್ಸ್
ನಂ. ೩೬, ೪೦ ಅಡಿ ರಸ್ತೆ,
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
✆ : ೨೬೭೫೭೧೫೯ / ೩೦೬೧೫೭೭೩



ಅಧ್ಯಕ್ಷರ ಮಾತು

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ ರೂಪಿಸಿ, ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸುವಾಗ ಯುವಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್', 'ನಿಮ್ಮೊಂದಿಗೆ ನಾವು', 'ಮನೆಗೊಂದು ಕಲಾಕೃತಿ', 'ಜನಪದ ಶ್ರುತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಚಿತ್ರದುರ್ಗದ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ॥ ಎಂ.ವಿ. ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫಾಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡಿದ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕಾಡುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯೂ ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ **'ಕಲಾವಾರ್ತೆ'** ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. **ಕಲಾವಿದರ ಮಾಲಿಕೆಯಲ್ಲಿ** ಒಂಬತ್ತು ಜನ ಹಿರಿಯ ಕಲಾವಿದರಾದ ಕೆ. ಕೇಶವಯ್ಯ, ಎಸ್. ಕಾಳಪ್ಪ, ಎಚ್.ಎಸ್. ಇನಾಮತಿ, ರಘೋತ್ತಮ ಪುಟ್ಟಿ, ವ್ಹಿ.ಟಿ. ಕಾಳೆ, ಪುರುಷೋತ್ತಮ ಕಾರಂತ, ಎಂ.ಆರ್. ಬಾಳೀಕಾಯಿ, ವ್ಹಿ.ಜಿ. ಅಂದಾನಿ ಹಾಗೂ ಸಿ. ಚಂದ್ರಶೇಖರ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇದರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು, ಆಯಾ ಲೇಖಕರು ಈ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಅದನ್ನು ಸಂಪಾದಿಸಿಕೊಟ್ಟ ಡಾ॥ ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲನೋಟವನ್ನು ಒಂದೆಡೆಗೆ ತರುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಅದಕ್ಕೆ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. **ಜನಪ್ರಿಯ ಕಲಾಮಾಲೆಯ** ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವಿಶಿಷ್ಟ ಹಿನ್ನೆಲೆಯಲ್ಲಿ ಪರಿಚಯಿಸುವ ಹತ್ತು ಪುಸ್ತಕಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ. ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ॥ ಎಸ್.ಸಿ. ಪಾಟೀಲರು. ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಅಕಾಡೆಮಿಯ ಮನವಿಯಂತೆ ಭಾವಚಿತ್ರ ಪರಂಪರೆಯ **'ಮುಖಗಳೊಂದಿಗೆ ಮುಖಾಮುಖಿ'** ಎಂಬ ಅಧ್ಯಯನ ಯೋಗ್ಯ ಕೃತಿಯನ್ನು ಬರೆದುಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ. ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಇದಲ್ಲದೆ ಇಪ್ಪತ್ತು ಹಿರಿಯ-ಕಿರಿಯ ಕಲಾವಿದರ ಕಲಾಕೃತಿಗಳ ಚಿತ್ರಸಂಪುಟವೊಂದು ಅಕಾಡೆಮಿ ಸದಸ್ಯ ಶ್ರೀ ಪ.ಸ. ಕುಮಾರ್ ಅವರ ಸಂಪಾದಕತ್ವದಲ್ಲಿ ಬರುತ್ತಿದೆ.

ರಘೋತ್ತಮ ಪುಟ್ಟಿ, ರಾಮನರಸಯ್ಯ, ವಿಷ್ಣುದಾಸ್ ರಾಮದಾಸ್, ಆರ್.ಎಂ. ಹಡಪದ್, ಎಂ.ಎಸ್. ಚಂದ್ರಶೇಖರ್, ಎಸ್.ಜಿ. ವಾಸುದೇವ್, ಸಿ. ಚಂದ್ರಶೇಖರ್ ಇವರುಗಳ ಸಾಧನೆ ಕುರಿತಂತೆ ಶ್ರೀ ಬಿ.ಎಸ್. ದೇಸಾಯಿ ಹಾಗೂ ಪ.ಸ. ಕುಮಾರ್ ಇವರುಗಳು ಸಾಕ್ಷ್ಯಚಿತ್ರಗಳ ಸಿ.ಡಿ.ಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ವಾರ್ಷಿಕ ವರದಿಯಲ್ಲಿ ನೀಡುತ್ತಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್, ಚೆನ್ನೈ, ಐಫಾಕ್ಸ್ ಸಂಸ್ಥೆಗಳಿಗೆ ನಮ್ಮ ವಂದನೆಗಳು.

ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಶೇಷವಾಗಿ ಸಮನ್ವಯಕಾರರಾಗಿ ಹಲವಾರು ಕಾರ್ಯಕ್ರಮಗಳನ್ನು ಆಗುಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿ ವರ್ಗದ ರಾಜು, ವೆಂಕಟೇಶ್, ಗಂಗಾಧರ, ಮುತ್ತು, ಬಾಲು, ಲೋಕೇಶ ಮತ್ತು ಅರವಿಂದ ಅವರುಗಳಿಗೆ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು.

ನಮ್ಮ ಈ ಕಿರು ಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

- ಪೀಟರ್ ಲೂಯಿಸ್

ಲೇಖಕರ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿ ದೃಶ್ಯಕಲಾ ಸಂಸ್ಕೃತಿಯ ಉಳಿವಿಗಾಗಿ ಮತ್ತು ಅದನ್ನು ಇನ್ನಷ್ಟು ಬೆಳೆಸುವಿಕೆಗಾಗಿ ಜನ್ಮ ತಾಳಿದ ಸಂಸ್ಥೆ. ಅದು ವಿಶೇಷವಾಗಿ ಯೋಜನೆಗಳನ್ನು ರೂಪಿಸಿ ಕಾರ್ಯಾಚರಣೆಯಲ್ಲಿ ತರುವ ಮೂಲಕ ಈ ಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಯನ್ನು ಮಾಡುವುದು ಇದರ ಮಹತ್ವದ ಉದ್ದೇಶವಾಗಿದೆ. ಅದರಲ್ಲಿ ಪ್ರಕಟಣಾ ಯೋಜನೆ ತುಂಬಾ ಮಹತ್ವದ ಯೋಜನೆಯಾಗಿದ್ದು ಇದರ ಮೂಲಕ ದೃಶ್ಯ ಮೂಲದ ಸಂಸ್ಕೃತಿಯನ್ನು ಅಕ್ಷರ ಮೂಲದ ಸಂಸ್ಕೃತಿಯನ್ನಾಗಿಸಿ ದಾಖಲೀಕರಣ ಮಾಡುವಂತಹ ಪ್ರಕ್ರಿಯೆ ಇಲ್ಲಿ ನಡೆಯುತ್ತಿದೆ. ಇದು ಮುಂದಿನ ತಲೆಮಾರಿನ ಜನರಿಗೆ ನಾವು ಅವಶ್ಯವಾಗಿ ಮಾಡಬೇಕಾದ ಕಾರ್ಯವಾಗಿದೆ.

ಅಕಾಡೆಮಿ ಕಲೆ, ಕಲಾವಿದರ ಕುರಿತಾದ ಗ್ರಂಥಗಳನ್ನು ಈಗಾಗಲೇ ನಿರಂತರವಾಗಿ ಪ್ರಕಟಿಸುತ್ತಾ ಬಂದಿದೆ. ಈ ಪರಂಪರೆಯ ಹಿನ್ನೆಲೆಯಲ್ಲಿ ಕಲಾವಿದರ ಮಾಲೆಗಾಗಿ ಕಲಾವಿದ ವಿ.ಟಿ. ಕಾಳೆ ಅವರ ಕುರಿತು ನನಗೆ ಪುಸ್ತಕ ಬರೆಯಲು ಅಕಾಡೆಮಿ ಅವಕಾಶ ಕೊಟ್ಟಿರುವುದಕ್ಕಾಗಿ ಮೊದಲು ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್‌ರವರಿಗೆ ಮತ್ತು ಎಲ್ಲಾ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಪುಸ್ತಕ ನಿಜವಾಗಿ ಈ ಹಿಂದೆಯೇ ಯಾವಾಗಲೋ ಬರಬೇಕಾಗಿತ್ತು. ಕಾರಣಾಂತರಗಳಿಂದ ನಿಂತು ಹೋಗಿದ್ದ (ಕಲಾವಿದ ವಿ.ಟಿ.ಕಾಳೆಯವರ) ಈ ಗ್ರಂಥ ಪ್ರಸ್ತುತ ಅಕಾಡೆಮಿಯ ಸದಿಚ್ಛೆಯ ಮೇರೆಗೆ ಈಗ ಬೆಳಕು ಕಾಣುತ್ತಿರುವುದು ನನಗೆ ತುಂಬಾ ಸಂತೋಷವನ್ನು ತಂದಿದೆ.

ಶ್ರೀ ಕಾಳೆಯವರ ಬರವಣಿಗೆಯ ಹಸ್ತಪ್ರತಿಯನ್ನು ಅಕಾಡೆಮಿಯ ಸ್ಥಾಯಿ ಸಮಿತಿ ಪರಿಶೀಲಿಸಿ ಇನ್ನೇನು ಪ್ರಕಟಣೆಗೆ ಕಳಿಸಬೇಕು ಎಂಬ ಹಂತದಲ್ಲಿ ಇದ್ದಾಗ ಮತ್ತೆ ಪುಸ್ತಕಕ್ಕೆ ತೊಂದರೆ ಪ್ರಾರಂಭವಾಯಿತು. ಅದು ನಿವಾರಣೆಯಾಗಿ ಈಗ ಮುದ್ರಣಕ್ಕೆ ಹೋಗುತ್ತಿರುವುದು ಬರಹಗಾರನಾದ ನನಗೆ ವೈಯಕ್ತಿಕವಾಗಿಯೂ ಸಂತೋಷವಾಗಿದೆ. ಇದಕ್ಕೆ ಕಾರಣ ಎರಡು. ನಮ್ಮ ಹಿರಿಯ ತಲೆಮಾರಿನ ಗಮನಾರ್ಹ ಕಲಾವಿದರಲ್ಲಿ ಒಬ್ಬರಾದ ಶ್ರೀ ಕಾಳೆಯವರ ಕುರಿತು ಪುಸ್ತಕ ಬರದಿದ್ದರೆ ಅದು ಕಾಳೆಯವರಿಗಾದ ಹಾನಿ ಅಲ್ಲ, ಕಲಾಲೋಕಕ್ಕೆ ಆದ ಹಾನಿ ಎಂಬುದು ನನ್ನ ಭಾವನೆ. ಪ್ರಕಟಣೆಗೆ ಎಷ್ಟೇ ತೊಂದರೆ ಬಂದರೂ ಕೊನೆಗೆ ಪ್ರಕಟಗೊಳ್ಳಲು ಅಕಾಡೆಮಿ ಮತ್ತು ಶ್ರೀ ಕಾಳೆಯವರು ಒಪ್ಪಿದುದು ಒಂದು ಕಾರಣ. ಇನ್ನು ನಾನು ಬರೆದ ಪುಸ್ತಕವೊಂದು ನಾನೇ ಅಕಾಡೆಮಿ ಸದಸ್ಯನಾಗಿದ್ದರೂ ಬರದಿದ್ದರೆ ಹೇಗೆ? ಮೇಲಾಗಿ ಪ್ರಕಟಣಾ ಸಮಿತಿಯ ಸದಸ್ಯನಾಗಿ ಶ್ರೀ ಕಾಳೆಯವರ ಪುಸ್ತಕ ಅಕಾಡೆಮಿಯ

ಅಧ್ಯಕ್ಷರ ಅವಧಿಯಲ್ಲಿ ಬಂದೇ ತೀರಬೇಕೆಂಬ ಒತ್ತಾಸೆಯನ್ನು ತರುವುದು ನನ್ನ ಕರ್ತವ್ಯವೂ ಆಗಿತ್ತು. ಕಾರಣಗಳು ಏನೇ ಇರಲಿ ಅಂತೂ ಕೊನೆಗೆ ಪ್ರಕಟವಾಗುತ್ತಿದೆ ಎನ್ನುವುದು ಇನ್ನೊಂದು ಕಾರಣ.

ಹೀಗೆ ಹಲವಾರು ವಿಘ್ನಗಳನ್ನು ಎದುರಿಸಿ ಈ ಗ್ರಂಥ ನಿಮ್ಮ ಕೈಗೆ ಬರುತ್ತಿದೆ. ತಮ್ಮ ಮುಕ್ತವಾದ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವಿದೆ.

ಕನ್ನಡ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರೂ, ಸದ್ಯದ ಕುಲಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಕೆ.ವಿ. ನಾರಾಯಣ ಅವರೂ ನನ್ನ ಶೈಕ್ಷಣಿಕ ಚಟುವಟಿಕೆಗಳಿಗೆ ಮತ್ತು ಅಕಾಡೆಮಿಯ ಸಭೆ ಸಮಾರಂಭಗಳಿಗೆ ಹೋಗಲು ತುಂಬ ಸಹಕಾರ ನೀಡಿ ಉಪಕರಿಸಿದ್ದಾರೆ. ಅವರಿಗೆ ನನ್ನ ಅನಂತ ವಂದನೆಗಳು. ಕಲಾವಿದರ ಮಾಲೆಯ ಸಂಪಾದನಾ ಕಾರ್ಯದ ಜವಾಬ್ದಾರಿಯನ್ನು ಹೊತ್ತು ಕಲಾತ್ಮಕವಾಗಿ ಈ ಪುಸ್ತಕ ರೂಪಗೊಳ್ಳಲು ಕಾರಣರಾದ ಗೆಳೆಯ ಡಾ. ಅ.ಲ.ನ. ಅವರಿಗೆ ವಂದನೆಗಳು.

ಶ್ರೀ ಕಾಳೆಯವರು ಮತ್ತು ಅವರ ಕುಟುಂಬವರ್ಗದವರು ನಾನು ಕ್ಷೇತ್ರಕಾರ್ಯಕ್ಕೆ ಸಂಡೂರಿಗೆ ಹೋದಾಗಲೆಲ್ಲ ನನ್ನನ್ನು ತುಂಬ ಪ್ರೀತಿಯಿಂದ ಕಂಡು ತುಂಬು ಹೃದಯದ ಸಹಕಾರ ನೀಡಿದ್ದಾರೆ. ವಿಶೇಷವಾಗಿ ಅವರ ಮಕ್ಕಳನ್ನು ಸ್ಮರಿಸದೇ ಇರಲಾರೆ. ಪ್ರಕಟಣೆಯಲ್ಲಿ ಡಾ. ಅ.ಲ.ನ. ಅವರಿಗೆ ಸಹಕಾರಿಯಾಗಿ ಕಾರ್ಯನಿರ್ವಹಿಸಿದ ಇನ್ನೋರ್ವ ಕಿರಿಯ ಮಿತ್ರ ಶ್ರೀ ಎಸ್. ವೆಂಕಟೇಶ್ ಮತ್ತು ಉತ್ತಮವಾದ ಮುಖಪುಟವನ್ನು ವಿನ್ಯಾಸಗೊಳಿಸಿದ ಶ್ರೀ ಸುಧಾಕರ ದರ್ಬೆ ಅವರಿಗೆ, ಪ್ರಕಟಣೆಯಲ್ಲಿ ಸಮನ್ವಯಕಾರರಾಗಿ ಕಾರ್ಯ ನಿರ್ವಹಿಸಿದ ಶ್ರೀ ಪ.ಸ. ಕುಮಾರ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಅವರ ಪ್ರೀತಿ ವಾತ್ಸಲ್ಯಕ್ಕೆ ಋಣಿಯಾಗಿದ್ದೇನೆ. ಪ್ರಕಟಣೆಯ ಸಂದರ್ಭದಲ್ಲಿ ನೆರವಾದ ಶ್ರೀ ಆನಂದ ಪೂಜಾರ, ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಡಾ. ಯಾದಪ್ಪ ಪರದೇಶಿ ಮತ್ತು ಡಾ. ಶಿವಾನಂದ ಬಂಟನೂರ ಇವರಿಗೆಲ್ಲ ನನ್ನ ಶುಭ ಬಯಕೆಗಳು.

- ಡಾ. ಎಸ್.ಸಿ. ಪಾಟೀಲ



ವಿ.ಟಿ. ಕಾಳೆ / V.T. Kale



ಡಾ॥ ಎಸ್.ಸಿ. ಪಾಟೀಲ

ಗುಲಬರ್ಗಾ ಜಿಲ್ಲೆ, ಜೇವರ್ಗಿ ತಾಲ್ಲೂಕಿನ ಮಾನಶಿವನಗಿಯಲ್ಲಿ 1955ರಲ್ಲಿ ಜನಿಸಿದ ಡಾ॥ ಎಸ್.ಸಿ. ಪಾಟೀಲರು ಎಂ.ಎ., ಎಂ.ಎಡ್.,ಗಳಲ್ಲದೆ ಚಿತ್ರಕಲೆ ಹಾಗೂ ಶಾಸನಶಾಸ್ತ್ರ ಗಳಲ್ಲಿ ಡಿಪ್ಲೊಮಾ ಪದವಿ ಪಡೆದಿದ್ದಾರೆ. ಜನಪದ ಚಿತ್ರಕಲೆ ಹಾಗೂ ಕಲಾಶಿಕ್ಷಣ ಕುರಿತು (ವಿಶೇಷ ಅಧ್ಯಯನ ಮಾಡಿ) ಪ್ರತ್ಯೇಕವಾದ ಎರಡು ಪಿಎಚ್.ಡಿ., ಪದವಿಗಳನ್ನು ಪಡೆದಿದ್ದಾರೆ. ಚಿತ್ರಕಲಾವಿದರಾಗಿ ಜಿಲ್ಲೆ ಹಾಗೂ ರಾಜ್ಯಮಟ್ಟದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದು ಆರು ಪುಸ್ತಕಗಳನ್ನು ರಚಿಸಿಕೊಟ್ಟಿರುವುದಲ್ಲದೆ, ಹತ್ತಾರು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಕಲೆ ಹಾಗು ಶಿಕ್ಷಣ ಕ್ಷೇತ್ರಗಳಲ್ಲಿ ಕೆಲವು ಪ್ರಶಸ್ತಿ ಪಡೆದಿರುವ ಶ್ರೀಯುತರು ಕೆಲವರ್ಷ ಶಿಕ್ಷಣ ಸಂಸ್ಥೆಯೊಂದರಲ್ಲಿ ಇದ್ದರಾದರೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಚಿತ್ರ, ಶಿಲ್ಪ ನಿಕಾಯಕ್ಕೆ ಬಂದ ಮೇಲೆ ಅವರ ಕ್ರಿಯಾಶೀಲತೆ ಬೆಳಕಿಗೆ ಬರುವಂತಾಯಿತು.

ಕನ್ನಡ ವಿಶ್ವವಿದ್ಯಾಲಯ ಒಂದು ಸಂಶೋಧನಾ ಕೇಂದ್ರವಾಗಬೇಕೆಂಬ ಆಶಯದಿಂದ ಆರಂಭವಾಗಿದ್ದು ಚಿತ್ರ-ಶಿಲ್ಪ ವಿಭಾಗ ಆ ಕಾರ್ಯವನ್ನು ಯಶಸ್ವಿಯಾಗಿ ಆಗುಮಾಡುತ್ತಿದೆ ಯೆಂದರೆ ಅತಿಶಯೋಕ್ತಿಯಲ್ಲ. ಡಾ॥ ಪಾಟೀಲರು ಮುಖ್ಯಸ್ಥರಾಗಿ ಬಂದ ಮೇಲೆ ಕಲಾಗಾರಗಳು, ಕಲೆಯ ಬಗ್ಗೆ ವಿಚಾರ ಸಂಕಿರಣಗಳು, ಕಲಾ ಶಿಕ್ಷಕರಿಗೆ ಪುನರ್ ಮನನ ಶಿಬಿರಗಳು ಎಡೆಬಿಡದೆ ನಡೆದವು. ಶಿಲ್ಪಕಲಾ ಕೇಂದ್ರವಾದ ಬಾದಾಮಿಯಲ್ಲಿ ಶಿಲ್ಪಶಾಲೆಯೊಂದು ಆರಂಭವಾಗಿ ಯಶಸ್ವಿಯಾಗಿ ನಡೆಯುತ್ತಿದೆ. ಚಿತ್ರಕಲೆಗೆ ಸಂಬಂಧಿಸಿದ ವಿಭಾಗ ಹಂಪೆಯಲ್ಲಿಯೇ ಮುಂದುವರಿದಿದೆ. ಮುಖ್ಯವಾಗಿ ಸಂಶೋಧನಾ ಕ್ಷೇತ್ರದಲ್ಲಿ ಡಾ॥ ಪಾಟೀಲರ ನೇತೃತ್ವದಲ್ಲಿ ಮಹತ್ತರವಾದ ಕಾರ್ಯಗಳಾಗಿವೆ. ಎಂ.ಫಿಲ್., ಡಿ.ಲಿಟ್ ಸೇರಿದಂತೆ ಪಿಎಚ್.ಡಿ. ಪಡೆದವರ ಸಂಖ್ಯೆ ಇಪ್ಪತ್ತಕ್ಕೂ ಮೀರಿದೆ. ಸ್ನಾತಕೋತ್ತರ ಪದವಿಗೆ ಡಸರ್ಟೇಷನ್ ಕಡ್ಡಾಯವಿದ್ದು ಅವುಗಳೂ ಸಹ ಡಾ॥ ಪಾಟೀಲರ ಮಾರ್ಗದರ್ಶನದಲ್ಲಿ ಅಧಿಕ ಸಂಖ್ಯೆಯಲ್ಲಿ ಹೊರಬಂದಿವೆ. ಚಿತ್ರಶಿಲ್ಪಗಳಿಗೆ ಸಂಬಂಧಿಸಿದಂತೆ ಮಾಹಿತಿ ಕೇಂದ್ರವೊಂದು ಸಂಗ್ರಹಕಾರ್ಯದಲ್ಲಿ ತೊಡಗಿದೆ. ಕರ್ನಾಟಕದ ಎಪ್ಪತ್ತೈದಕ್ಕೂ ಹೆಚ್ಚು ಕಲಾ ಶಾಲೆಗಳು ಹಂಪಿಯ ವಿಶ್ವವಿದ್ಯಾಲಯದ ತಕ್ಕೆಗೆ ಬಂದಿದ್ದು ಅವುಗಳಿಗೆ ಪಠ್ಯವಸ್ತು, ಪಠ್ಯಪುಸ್ತಕ, ಪರೀಕ್ಷೆಗಳ ನಿಯಮಾವಳಿಗಳು ಸಿದ್ಧವಾಗುತ್ತಿರುವುದು ರಾಜ್ಯದ ಚಿತ್ರಕಲಾ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ದಾಖಲಾಗ ಬೇಕಾದ ಸಂಗತಿ. ಕಲಾಕ್ಷೇತ್ರದಲ್ಲಿ ಒಂದು ಏಕರೂಪತೆ ಬಂದು, ಸರ್ವತೋಮುಖ ಅಭಿವೃದ್ಧಿ ಯಾಗುವಂತೆ ಯೋಜಿಸಿದ ಡಾ॥ ಪಾಟೀಲರು ಅಭಿನಂದನಾರ್ಹರು.

ಪ್ರಸ್ತುತ ಶ್ರೀ ವ್ಹಿ.ಟಿ. ಕಾಳೆಯವರ ಬಗ್ಗೆ ಪುಸ್ತಕ ರಚಿಸಿಕೊಟ್ಟಿರುವ ಶ್ರೀಯುತರು ಇದೇ ಅವಧಿಯಲ್ಲಿ ಜನಪದ ಕಲೆಯ ವಿವಿಧ ಪ್ರಕಾರಗಳನ್ನು ಕುರಿತಂತೆ ಎಂಟು ಪುಸ್ತಕಗಳು ಹಾಗೂ ರಾಜ್ಯದ ಚಿತ್ರಕಲಾ ಪರಿಸ್ಥಿತಿಯ ಬಗ್ಗೆ ವಿಪುಲ ಮಾಹಿತಿಯುಳ್ಳ 'ಚಿತ್ರಕಲಾ ದರ್ಶನ'ವೆಂಬ ಬೃಹತ್ ಸಂಪುಟವನ್ನು ಸಂಪಾದಿಸಿಕೊಟ್ಟಿದ್ದಾರೆ. ❑

ವಿ.ಟಿ. ಕಾಳೆ

ಸೃಜನಶೀಲ ಮನುಷ್ಯನ ಅಭಿವ್ಯಕ್ತಿಗೆ ಸರಿಯಾದ ಪ್ರೋತ್ಸಾಹ, ಅವಕಾಶಗಳು ಮತ್ತು ಅವನ ನಿರಂತರ ಪರಿಶ್ರಮ, ಪ್ರಯತ್ನಗಳಿದ್ದರೆ ಆ ವ್ಯಕ್ತಿಯ ಪ್ರತಿಭೆ ಬಹುಶೃತವಾಗಿ ಬೆಳೆದು ದೈತ್ಯರೂಪದಲ್ಲಿ ಬೆಳಕಿಗೆ ಬರುತ್ತದೆ. ಇಂತಹ ವ್ಯಕ್ತಿಗಳು ನಮಗೆ ಅಪರೂಪವಾಗಿ ಕಾಣಸಿಗುತ್ತಾರೆ. ಸಾಮಾನ್ಯವಾಗಿ ಸಾಧಕರು ತಮ್ಮ ಎಲ್ಲ ಸಾಮರ್ಥ್ಯವನ್ನು ಒಂದೆಡೆಗೆ ಕೇಂದ್ರೀಕರಿಸಿ ಒಂದೊಂದು ಕ್ಷೇತ್ರದಲ್ಲಿಯೇ ಯಶಸ್ಸಿನ ಮೆಟ್ಟಲೇರುತ್ತ ಹೋದವರಿಗೇನೂ ಕಡಿಮೆಯಿಲ್ಲ. ಆದರೆ ಹಲವಾರು ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿ ಆಯಾ ಕ್ಷೇತ್ರದ ದಿಗಂತವನ್ನು ವಿಸ್ತರಿಸುವಲ್ಲಿ ಸಕ್ರಿಯ ಕಾಣಿಕೆ ನೀಡುವ ವ್ಯಕ್ತಿಗಳು ಬೆರಳೆಣಿಕೆಯಷ್ಟು. ಇಂತಹ ಅಪರೂಪದ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಕರ್ನಾಟಕದ ಹಿರಿಯ ತಲೆಮಾರಿನ ಕಲಾವಿದರಲ್ಲಿ ಎದ್ದು ಕಾಣುವ ಹೆಸರು ವಿ.ಟಿ.ಕಾಳೆ.

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನೆಲೆಸಿರುವ ವಿ.ಟಿ.ಕಾಳೆಯವರು ಸಮಕಾಲೀನ ಕಲಾ ಸಂದರ್ಭದಲ್ಲಿ ಚಿತ್ರಕಾರರಾಗಿ, ಕಲಾಶಿಕ್ಷಕರಾಗಿ, ಕಲಾಬರಹಗಾರರಾಗಿ, ಶಿಲ್ಪಕಾರರಾಗಿ, ಸಂಗೀತಗಾರ, ನಾಟಕ ನಿರ್ದೇಶಕರಾಗಿ, ನಟರಾಗಿ, ಪ್ರಸಾಧನ ಕಲಾವಿದರಾಗಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಗುರುತಿಸಿಕೊಂಡಿರುವ ಶ್ರೀಯುತರ ಜೀವನ ಸಾಧನೆಯ ಸ್ಥೂಲ ಪರಿಚಯವಿಲ್ಲಿದ್ದು, ಚಿತ್ರಕಲಾವಿದರಾಗಿ ಅವರನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಬಾಲ್ಯ-ಸಾಂಸ್ಕೃತಿಕ ಪರಿಸರ

ಬಾಗಲಕೋಟೆ ಜಿಲ್ಲೆಯ ಹುನಗುಂದದ ಬಡ ರೈತ ಕುಟುಂಬದಲ್ಲಿ ತುಳಜಾರಾಮ ಕಾಳೆ ಮತ್ತು ಭರಮವ್ವ ದಂಪತಿಗಳ ಎಂಟನೆಯ ಮಗನಾಗಿ ೧೯೩೪ರಲ್ಲಿ ವೆಂಕಟೇಶ ಕಾಳೆ ಯವರು ಜನಿಸಿದರು. ವೆಂಕಟೇಶ ತುಳಜಾರಾಮ ಕಾಳೆ ಇವರು ಈಗ ವಿ.ಟಿ.ಕಾಳೆ ಎಂದೇ ಪ್ರಸಿದ್ಧರಾಗಿದ್ದಾರೆ. ಹತ್ತು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳನ್ನು ಹೊಂದಿದ ದೊಡ್ಡ ಸಂಸಾರವನ್ನು ನಿಭಾಯಿಸುವುದು ಇವರ ತಂದೆಯವರಿಗೆ ಕಠಿಣವಾಗಿತ್ತು. ಇಪ್ಪತ್ತೊಂದು ಎಕರೆ ವಾಲಿಕಾರಿಕೆಯ ಒಣ ಬೇಸಾಯದ ಭೂಮಿಯಿಂದ ಬರುವ ಉತ್ಪನ್ನ ಕುಟುಂಬ ನಿರ್ವಹಣೆಗೆ ಕಡಿಮೆ ಎನಿಸುತ್ತಿತ್ತು. ಕಾರಣ ಒಣ ಬೇಸಾಯ, ಅನಿಶ್ಚಿತ ಮಳೆಯಿಂದಾಗಿ ಬರಗಾಲ ಮೇಲಿಂದ ಮೇಲೆ ಉಂಟಾಗುತ್ತಿತ್ತು. ಇದೇ ವೇಳೆಯಲ್ಲಿ ಕೌಟುಂಬಿಕ ದುರಂತಗಳಿಂದಾಗಿ ಹಲವಾರು ಬವಣೆಪಟ್ಟು, ಗದಗಿನಲ್ಲಿ ನೆಲೆಸುವಂತಾಗಿದ್ದರಿಂದಾಗಿ ಕಾಳೆಯವರ ಕಲಾ ಪ್ರಪಂಚ ಚಿಗರೊಡೆಯುವಂತಾಯಿತು.

ಕಲೆಯ ಕಡೆಗೆ ಒಲಿದ ಮನಸ್ಸು

ಗದಗಿನಲ್ಲಿ ಇವರು ವಾಸಿಸುತ್ತಿದ್ದ ಪಕ್ಕದ ಮನೆಯಲ್ಲಿಯೇ ಎಮ್.ಸಿ.ಮುನವಳ್ಳಿಯವರು ಪೌಡರ್ ಫಿನಿಶಿಂಗ್ ಮೂಲಕ ಚಿತ್ರಗಳನ್ನು ರಚಿಸುತ್ತಿದ್ದರು. ಇದನ್ನು ಗಮನಿಸಿದ ಬಾಲಕ ಕಾಳೆಯವರ ಆಸಕ್ತ ಮನಸ್ಸು ಅತ್ತಕಡೆಗೆ ಸರಿಯಿತು. ಪ್ರತಿ ದಿನವೂ ಮುನವಳ್ಳಿಯವರು ಚಿತ್ರಿಸುತ್ತಿದ್ದಾಗ ಕಾಳೆ ಯವರು ಬಂದು ಕುತೂಹಲದಿಂದ ವೀಕ್ಷಿಸುವುದು ಮಾತ್ರವಲ್ಲದೇ ಚಿತ್ರ ಮುಗಿಯುವವರೆಗೆ ನಿಂತು ನೋಡುವುದು, ಬಿಡುವಿದ್ದಾಗ ಅವರ ಹತ್ತಿರ ಬಂದು ಕುಳಿತುಕೊಳ್ಳುವುದು ಮಾಡುತ್ತಿದ್ದರು. ನಂತರ ತಾವೂ ಮನೆಗೆ ಬಂದು ಹಾಗೆಯೇ ಚಿತ್ರಿಸುವ ಪ್ರಯತ್ನ ಮಾಡುತ್ತಿದ್ದರು. ಹೀಗೆ ಕಾಳೆಯವರಿಗೆ ಅರಿವಿಲ್ಲದಂತೆಯೇ ಅವರ ಸುಪ್ತಮನಸ್ಸು ಕಲೆಯೆಡೆಗೆ ಆಕರ್ಷಿತಗೊಂಡಿತ್ತು. ಒಂದು ದಿನ ಮುನವಳ್ಳಿಯವರು ಬಾಲಕ ಕಾಳೆ ಬಿಡಿಸಿದ ಚಿತ್ರಗಳನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ. ಕಲೆಯ ಬಗೆಗೆ ಈ ಬಾಲಕನಿಗಿರುವ ಅದಮ್ಯ ಉತ್ಸಾಹ, ಒಲವನ್ನು ಕಂಡು ಹರ್ಷಚಿತ್ತರಾಗಿ, ಕಲಾಗುರು ಟಿ.ಪಿ. ಅಕ್ಕಿಯವರ ಬಳಿಗೆ ಇವರನ್ನು ಕರೆತಂದು ಪರಿಚಯಿಸುತ್ತಾರೆ. ಅಕ್ಕಿಯವರು ಕಾಳೆಯವರ ಸುಪ್ತ ಕಲಾ ಪ್ರತಿಭೆಯನ್ನು ಗುರುತಿಸುತ್ತಾರೆ. ಅಲ್ಲಿಂದಲೇ ಕಾಳೆಯವರ ಬಣ್ಣದ ಬದುಕಿನ ಕಲಾಜೀವನದ ಅಧ್ಯಯನ ಪ್ರಾರಂಭಗೊಂಡಿತೆನ್ನಬಹುದು.

೧೯೪೭ ಆಗಸ್ಟ್ ೧೫ ನಮಗೆ ಸ್ವಾತಂತ್ರ್ಯ ಸಿಕ್ಕ ದಿನ. ಆಗಿನ್ನೂ ಬಾಲಕನಾಗಿದ್ದ ಕಾಳೆಯವರು ಅಂದಿನ ದಿನದ ಸಂಭ್ರಮವನ್ನು ನೆನಪಿಸಿಕೊಳ್ಳುತ್ತಾರೆ. ಗದುಗಿನಲ್ಲಿ ಪ್ರಾಥಮಿಕ ಶಾಲೆಯ ಹೆಡ್ ಮಾಸ್ತರ್ ಆಗಿದ್ದ ಸಿದ್ಧರಾಮಶೆಟ್ರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯ ದೊರೆತ ಅಂದಿನ ಮಧ್ಯರಾತ್ರಿ ಸಿದ್ಧರಾಮಶೆಟ್ರು ಉಲ್ಲಾಸದಿಂದ ಓಡಾಡಿ ಭಾರತದ ರಾಷ್ಟ್ರೀಯ ಧ್ವಜವನ್ನು ಹಾರಿಸಿದ್ದರು. ಈ ರೀತಿಯ ದೇಶಭಕ್ತ ಗುರುವೃಂದವನ್ನು ಹೊಂದಿದ ಕಾಳೆಯವರಲ್ಲಿಯೂ ಅವರಂತೆಯೇ ಆದರ್ಶ, ತ್ಯಾಗ, ತಮ್ಮತನದ ರಾಷ್ಟ್ರೀಯ ಭಾವನೆಗಳು ತುಂಬಿಕೊಂಡಿರುವುದು ಮಾತ್ರವಲ್ಲದೇ ಮುಂದೆ ಅವರ ಕಲಾಕೃತಿಗಳಲ್ಲಿಯೂ ಈ ಅಂಶಗಳು ಅಭಿವ್ಯಕ್ತಗೊಳ್ಳುತ್ತ ಹೋಗಿರು ವುದನ್ನು ಕಾಣಬಹುದು.

ಕಲಾ ಶಿಕ್ಷಣಕ್ಕಾಗಿ ಪಯಣ

೧೯೪೯ರಲ್ಲಿ ಮುನ್ಸಿಪಲ್ ಹೈಸ್ಕೂಲ್ ಗದಗ್ ಇಲ್ಲಿ ಎಂಟನೆಯ ತರಗತಿಗೆ ಪ್ರವೇಶ ಪಡೆದ ಕಾಳೆಯವರಿಗೆ ಟಿ.ಪಿ.ಅಕ್ಕಿಯವರ ಮಾರ್ಗದರ್ಶನ ದೊರಕಿದ್ದು ಅವರ ಜೀವನದ ಮಾರ್ಗವೇ ನಿರ್ಧಾರವಾಗಿ ಹೋಯಿತೆನ್ನಬಹುದು. ವಿದ್ಯಾರ್ಥಿದೆಸೆಯಿಂದ ಹಿಡಿದು ಮುಂದೆ ಅವರ ಬದುಕಿನುದ್ದಕ್ಕೂ ದಿಕ್ಸೂಚಿಯಾಗಿ ಅವರ ಕಷ್ಟ ಸುಖಗಳಿಗೆ, ಬೇಕುಬೇಡಗಳಿಗೆ ಸ್ಪಂದಿಸಿ ಅವರೊಬ್ಬ ಬಹುದೊಡ್ಡ ಕಲಾವಿದರಾಗಿ ರೂಪುಗೊಳ್ಳಲು ಟಿ.ಪಿ.ಅಕ್ಕಿಯವರು ನೀಡಿದ ಪ್ರೋತ್ಸಾಹ ಅನನ್ಯವಾದುದು. ಟಿ.ಪಿ.ಅಕ್ಕಿಯವರಿಗೆ ವಿದ್ಯಾರ್ಥಿಗಳೆಂದರೆ ಪಂಚ ಪ್ರಾಣ. ಅದರಲ್ಲೂ ಪ್ರತಿಭಾವಂತ ವಿದ್ಯಾರ್ಥಿಗಳಿದ್ದರೆ, ಅವರಿಗೆ ಏನೆಲ್ಲ ಸಹಾಯವನ್ನು ಮಾಡಲೂ ಇವರು ಮುಂದಾಗುತ್ತಿದ್ದರು. ಅವರ ಶಿಷ್ಯರಾಗಿದ್ದುದೇ ಒಂದು ಭಾಗ್ಯ, ಪುಣ್ಯ ವಿಶೇಷವೆಂಬ ಮಾತುಗಳು ಈಗಲೂ ಅವರ ವಿದ್ಯಾರ್ಥಿಗಳಲ್ಲಿ ಕೇಳಿ ಬರುತ್ತವೆ.

ಟಿ.ಪಿ.ಅಕ್ಕಿಯವರ ಹೆಸರು ಬಂದರೆ ಸಾಕು ವ್ಹಿ.ಟಿ.ಕಾಳೆಯವರು ಭಾವಪರವಶರಾಗುತ್ತಾರೆ. ''ನಾನು ಅಕ್ಕಿ ಗುರುಗಳ ಋಣದಲ್ಲಿ ಬೆಳೆದ ಕೂಸು. ನನಗೆ ಅವರು ಬರೀ ಗುರುಗಳಾಗಿ ಅಷ್ಟೇ ಅಲ್ಲ ನನ್ನ ಭಾಗದ ದೇವರೂ ಆಗಿದ್ದರು. ತಂದೆ-ತಾಯಿ, ಸ್ನೇಹಿತ, ಬಂಧು-ಬಳಗದವರ

ಸ್ನೇಹ-ವಿಶ್ವಾಸಕ್ಕಿಂತ ಹೆಚ್ಚಿನ ಪ್ರೀತಿಯನ್ನು ನಾನು ಅವರಿಂದ ಪಡೆದಿದ್ದೇನೆ. ಅಂಥವರು ಸಿಗುವುದು ತುಂಬಾ ಅಪರೂಪ. ನನ್ನಂತಹ ಅನೇಕ ಅಸಹಾಯಕ ಪ್ರತಿಭೆಗಳನ್ನು ಅವರು ಬೆಳೆಸಿದ ರೀತಿಯೇ ಅದ್ಭುತ. ಅಕ್ಕಿಯವರ ಶಿಷ್ಯವಾತ್ಸಲ್ಯವೇ ಅಂತಹುದು. ತಮ್ಮ ಶಿಷ್ಯರ ಶ್ರೇಯೋಭಿವೃದ್ಧಿಗೆ ತಮ್ಮ ಭವಿಷ್ಯನಿಧಿ ಹಣವನ್ನು ಅಷ್ಟೇ ಏಕೆ ಹೆಂಡತಿಯ ಕೊರಳಲ್ಲಿಯ ಕಂಠಹಾರವನ್ನೇ ಒತ್ತೆ ಇಟ್ಟು, ಮುಂಬೈಯಲ್ಲಿ ಕಲಿಯುವ ನನ್ನಂತಹ ವಿದ್ಯಾರ್ಥಿಗಳಿಗೆ ಹಣದ ಸಹಾಯ ಮಾಡಿದವರು. ತಮ್ಮ ಶಿಷ್ಯರು ಮುಂದೆ ಬರಲೆಂದು ತಮ್ಮ ಜೀವನ ಪರ್ಯಂತ ತ್ಯಾಗಜೀವಿಯಾಗಿ ಬದುಕಿದ ಮಹಾಚೇತನ ಅವರು'' ಎಂದು ಹೇಳುವ ಕಾಳೆಯವರ ಈ ಮಾತುಗಳಲ್ಲಿ ಅಕ್ಕಿಯವರ ಬಗೆಗಿನ ಅವರ ಗೌರವಾದರ ಎಂತಹುದು ಎಂಬುದನ್ನು ಕಾಣಬಹುದು. ಇಂತಹ ಶ್ರೇಷ್ಠ ಗುರುವಾತ್ಸಲ್ಯದಲ್ಲಿ ಬೆಳೆದ ಕಾಳೆಯವರು ಅವರಂತೆಯೇ ನಡೆ-ನುಡಿಯನ್ನು ಅಳವಡಿಸಿಕೊಂಡು ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ.

ಕಲಾಶಿಕ್ಷಣ

ಕಲೆಯ ಅಭಿರುಚಿಯನ್ನು ಬೆಳೆಯಿಸಿಕೊಂಡಿದ್ದ ಕಾಳೆಯವರು ಕಲಾಶಿಕ್ಷಣವನ್ನೇ ಆಯ್ಕೆಮಾಡಿ ಕೊಂಡರು. ಗದಗಿನ ಮುನಸಿಪಲ್ ಹೈಸ್ಕೂಲಿನಲ್ಲಿ ಎಲಿಮೆಂಟರಿ ಮತ್ತು ಇಂಟರ್ ಮೀಡಿಯೆಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳನ್ನು ಪಾಸಾದರು. ಆಗಿನ ಮುಂಬಯಿ ಸರಕಾರವು ನಡೆಸುತ್ತಿದ್ದ ಈ ಪರೀಕ್ಷೆಗಳಲ್ಲಿ ರ್ಯಾಂಕ್‌ನೊಂದಿಗೆ ಬಹುಮಾನಗಳನ್ನು ಪಡೆದುಕೊಂಡರು. ೧೯೫೨ರಲ್ಲಿ ಮುಂಬಯಿಯ ಸರ್.ಜೆ.ಜೆ.ಕಲಾಶಾಲೆಯಿಂದ ಚಿತ್ರಕಲೆಯ ಗವರ್ನಮೆಂಟ್ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ ಸಂದರ್ಭದಲ್ಲಿ ಕರ್ನಾಟಕದ ಕಲಾವಿದ್ಯಾರ್ಥಿಗಳು ಮುಂಬಯಿಗೆ ಹೋಗಿ ಪರೀಕ್ಷೆಗಳನ್ನು ಬರೆಯಬೇಕಾಗಿತ್ತು. ಕಾಳೆಯವರು ಮುಂಬಯಿಗೆ ಹೋಗುವಾಗಲೂ ಹಣದ ಅಡಚಣೆ ಉಂಟಾಯಿತು. ಒಂದು ಹಂತದಲ್ಲಿ ಕಾಳೆಯವರ ಆಪ್ತ ಗುರುಗಳಾದ ಬಿ.ಎಸ್.ಚವ್ಹಾಣ್, ಡಿ.ಎಫ್. ಪಾಟೀಲ ಮತ್ತು ಕಾಲವಾಡಮಠ ಎಂಬುವರು ಊರಲ್ಲಿ ಅವರಿವರನ್ನು ಬೇಡಿ ಹಣವನ್ನು ಸಂಗ್ರಹಿಸಿಕೊಟ್ಟು ಮುಂಬಯಿಗೆ ಕಳಿಸಿದುದನ್ನು ಕಾಳೆಯವರು ಈಗಲೂ ನೆನಪಿಸುತ್ತಾರೆ. ಗುರುಗಳಾದ ಟಿ.ಪಿ.ಅಕ್ಕಿಯವರೇ ಸ್ವತಃ ಕಾಗದ, ಬಣ್ಣ ಮತ್ತು ಹಣವನ್ನು ಕೊಟ್ಟು ಮುಂಬಯಿಗೆ ಕಳಿಸಿ ಕೊಟ್ಟರಂತೆ. ಹೀಗೆ ಕಷ್ಟದ ದಿನಗಳಲ್ಲಿ ಇವರ ಕಲಾಶಿಕ್ಷಣ ನಡೆಯಿತು.

ಶಿಕ್ಷಕ ವೃತ್ತಿ

ವ್ಹಿ.ಟಿ.ಕಾಳೆಯವರ ವೃತ್ತಿ ಜೀವನವನ್ನು ಎರಡು ಹಂತಗಳಲ್ಲಿ ಕಾಣಬಹುದು. ಮೊದಲ ಹಂತ ಗದಗಿನಲ್ಲಿ ಪ್ರಾರಂಭಗೊಂಡರೆ, ಎರಡನೆಯ ಹಂತ ಸಂಡೂರಿನಲ್ಲಿ ಮುಂದುವರಿದಿದೆ. ಈ ಹಿನ್ನೆಲೆಯಲ್ಲಿ ಅವರ ವೃತ್ತಿ ಬದುಕನ್ನು ನೋಡಬಹುದು.

೧೯೫೨ರಲ್ಲಿ ಕಾಳೆಯವರು ತಾವು ಕಲಾಶಿಕ್ಷಣ ಪಡೆದ ಮಾತೃಸಂಸ್ಥೆ ವಿಜಯಕಲಾಮಂದಿರ ಗದಗ ದಲ್ಲಿಯೇ ತಮ್ಮ ವೃತ್ತಿಜೀವನ ಪ್ರಾರಂಭಿಸಿದರು. ೧೯೬೪ರವರೆಗೂ ಇಲ್ಲಿಯೇ ಕಲಾಶಿಕ್ಷಕನಾಗಿ ಸೇವೆ ಸಲ್ಲಿಸಿದ ವ್ಹಿ.ಟಿ.ಕಾಳೆಯವರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು. ವಿದ್ಯಾರ್ಥಿ ಗಳ ಬಗ್ಗೆ ಪ್ರೀತಿ, ಒಲವು, ಅಂತಃಕರಣಗಳನ್ನು ಹೊಂದಿದ ಇವರು ಕಲಿಕೆಯ ವಿಷಯದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರು. ನಿಸರ್ಗಚಿತ್ರಣ, ವ್ಯಕ್ತಿಚಿತ್ರಣ, ಕರಡು ಚಿತ್ರಣಲೇಖನ (ಸ್ಕೆಚ್ಚಿಂಗ್), ಸಂಯೋಜನಾ ಚಿತ್ರಣ ಮುಂತಾದ ವಿಷಯಗಳನ್ನು ಇವರಿಂದ ಕಲಿತುಕೊಳ್ಳುವುದೇ ವಿದ್ಯಾರ್ಥಿಗಳಲ್ಲಿ ಒಂದು ಅಭಿಮಾನ ಮತ್ತು ಧನ್ಯತೆಯ

ಪ್ರತೀಕವಾಗಿತ್ತು. ಕಲಾವಿದ್ಯಾರ್ಥಿಗಳಿಗೆ ಅವರು ತಿಳಿಸಿ ಕೊಡುತ್ತಿದ್ದ ವಿಧಾನ ಆಕರ್ಷಕವಾಗಿತ್ತು. ಬಣ್ಣಗಳ ಮಿಶ್ರಣ, ಕುಂಚಗಳ ಬಳಸುವಿಕೆ, ಪ್ಯಾಲೆಟ್ ಉಪಯೋಗಿಸುವಿಕೆ, ಪೆನ್ಸಿಲ್ ಹಿಡಿದು ಸ್ಕೆಚ್ ಮಾಡುವ ವಿಧಿ ವಿಧಾನಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿದ್ದವು. ಇದೇ ಅವಧಿಯಲ್ಲಿ ವ್ಹಿ.ಟಿ.ಕಾಳೆಯವರು ಕರ್ನಾಟಕ ಸರಕಾರದ ಇಂಟರ್ ಮೀಡಿಯೆಟ್ ಮಾಡೆಲಿಂಗ್ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು.

ಹೀಗೆ ಕಲಾತಂತ್ರದ ಹತ್ತು ಹಲವು ವಿಷಯಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವಂತೆ ಹೇಳಿಕೊಡುತ್ತಿದ್ದುದನ್ನು ಜೊತೆಗೆ ಆಗಾಗ ಕಲಾಇತಿಹಾಸದ ಪಾಠಗಳನ್ನು ರಸವತ್ತಾಗಿ ತಿಳಿಸುತ್ತಿದ್ದುದನ್ನು ಅವರ ವಿದ್ಯಾರ್ಥಿ ಡಾ.ಬಿ.ಕೆ.ಹಿರೇಮಠರು ಈಗಲೂ ಸ್ಮರಿಸುತ್ತಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಕಾಳೆಯವರಿಗೆ ತಾವು ವಿದ್ಯಾಭ್ಯಾಸ ಮಾಡಿದ ಕಲಾಶಾಲೆಯಲ್ಲಿಯೇ ಶಿಕ್ಷಕನಾಗಿ ಸೇವೆಸಲ್ಲಿಸುವ ಸದವಕಾಶ ಸಿಕ್ಕಿದ್ದರಿಂದ ಅವರ ಕಲಾಬದುಕಿಗೆ ಸ್ಫೂರ್ತಿ ದೊರೆತಂತಾಯಿತು. ವಿಜಯಕಲಾಮಂದಿರವು ಬೋಧನಾರಂಗವೇ ಸಾಧನಾರಂಗವೂ ಆಗಿ ಅವರ ಮುಂದಿನ ಕಲಾತ್ಮಕ ಬದುಕಿನ ಭವ್ಯ ಸೌಧಕ್ಕೆ ಅಡಿಪಾಯ ಹಾಕಿಕೊಟ್ಟಿತು. ಬೋಧನೆಯೊಂದಿಗೆ ಇವರ ಕುಶಲಕುಂಚ ಈ ಹಂತದಲ್ಲಿ ಸಾವಿರಾರು ಕಲಾಕೃತಿಗಳ ರಚನಾ ವಿನ್ಯಾಸಕ್ಕೆ ಕಾರಣೀಭೂತವಾಯಿತು.

ಕಾಳೆಯವರ ಮಾರ್ಗದರ್ಶನದಲ್ಲಿ ಹಲವಾರು ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ರ್‍ಯಾಂಕ್‌ಗಳನ್ನು ವಿವಿಧ ಪರೀಕ್ಷೆಗಳಲ್ಲಿಗಳಿಸಿಕೊಂಡಿರುವುದು ಮಾತ್ರವಲ್ಲದೇ ಹತ್ತು ಹಲವು ಪ್ರದರ್ಶನಗಳಲ್ಲಿ ಪ್ರಶಸ್ತಿ ಸಹಿತ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಯಲ್ಲಿ ಕಾಳೆಯವರ ಮಾರ್ಗದರ್ಶನದ ಪಾಲನ್ನೂ ಮರೆಯುವಂತಿಲ್ಲ. ಒಬ್ಬ ಒಳ್ಳೆಯ ಶಿಕ್ಷಕ, ಉತ್ತಮ ಸ್ನೇಹಿತ, ಉತ್ತಮ ಮಾರ್ಗದರ್ಶಕ, ಉತ್ತಮ ತತ್ತ್ವಜ್ಞಾನಿಯಂತೆ ಇರಬೇಕು ಎಂಬ ಇಂಗ್ಲಿಷ್ ಗಾದೆ ಮಾತಿಗೆ ವ್ಹಿ.ಟಿ.ಕಾಳೆಯವರು ನಿದರ್ಶನದಂತಿದ್ದಾರೆ. ಅವರೊಬ್ಬ ಒಳ್ಳೆ ಸ್ನೇಹಿತನಾಗಿ, ಒಳ್ಳೆ ಮಾರ್ಗದರ್ಶಿಯಾಗಿ, ಅನುಭವಗಳನ್ನು ಧಾರೆ ಎರೆಯುವಲ್ಲಿ ತತ್ವಜ್ಞಾನಿಯಂತೆ ಇರುವುದನ್ನು ಅವರ ನೂರಾರು ವಿದ್ಯಾರ್ಥಿಗಳು ಇಂದಿಗೂ ಸ್ಮರಿಸುತ್ತಾರೆ. ಇದೇ ವೇಳೆಯಲ್ಲಿ ಟಿ.ಪಿ.ಅಕ್ಕಿಯವರು ವಿಜಯ ಕಲಾಮಂದಿರದಲ್ಲಿ ವಿಜಯ ನಾಟ್ಯಸಂಘವೆಂಬ ಅಂಗ ಸಂಸ್ಥೆಯನ್ನು ನಾಟಕದ ಕಲೆಯ ಹವ್ಯಾಸದ ತಮ್ಮ ಶಿಷ್ಯರಾದ ವ್ಹಿ.ಟಿ.ಕಾಳೆ, ಎಂ.ಜೆ.ವಾಚೇದಮಠ, ಎಲ್.ಜಿ.ಹಂದಿಗೋಳ್, ಎಚ್.ಎನ್. ಹೂಗಾರ ಮೊದಲಾದವರಿಗಾಗಿಯೇ ಪ್ರಾರಂಭಿಸಿದರು. ಇದಕ್ಕಾಗಿ ರಂಗಭೂಮಿಯ ಪರಿಕರಗಳ ಮತ್ತು ನಾಟಕ ರಚನೆ, ಅಭಿನಯ ಹಾಗೂ ನಿರ್ದೇಶನಗಳ ಅಭ್ಯಾಸಕ್ಕಾಗಿ ಅಕ್ಕಿಯವರು ಕಾಳೆಯವರನ್ನು ವೃತ್ತಿ ನಾಟಕ ಕಂಪನಿಗೆ ತರಬೇತಿ ಪಡೆಯಲು ಕಳುಹಿಸುತ್ತಾರೆ. ಅಲ್ಲಿಂದ ಬಂದ ಕಾಳೆಯವರು ವಿಜಯ ನಾಟ್ಯಸಂಘದ ಮೂಲಕ ಅನೇಕ ನಾಟಕಗಳನ್ನು ಆಡುತ್ತಾ, ನಿರ್ದೇಶಿಸುತ್ತಾ ತಮ್ಮ ಕಲಾ ಪ್ರತಿಭೆಯ ಜೊತೆಗೆ ನಾಟ್ಯಸಂಘವನ್ನು ಬೆಳೆಸಿದರು.

ಈ ಮಧ್ಯೆ ೧೯೬೦ರಲ್ಲಿ ಕಾಳೆಯವರು ಮದುವೆ ಮಾಡಿಕೊಂಡರು. ಇವರ ಕುಟುಂಬ ಬೆಳೆಯ ತೊಡಗಿತು. ಅಣ್ಣನ ಕುಟುಂಬದ ಜವಾಬ್ದಾರಿಯೂ ಇವರ ಮೇಲೆ ಬಿತ್ತು. ಅತ್ತಿಗೆ ಹಾಗೂ ಅಣ್ಣನ ಮಗಳನ್ನು ಪೋಷಿಸುವ ಹೊಣೆಗಾರಿಕೆಯನ್ನು ಇವರು ನಿರ್ವಹಿಸುತ್ತಾರೆ. ಈ ಪರಿಸ್ಥಿತಿಯಲ್ಲಿ ವಿಜಯ ಕಲಾ ಮಂದಿರದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಷ್ಟಕ್ಕಷ್ಟೆ ಇತ್ತು. ಕಾರಣ ಸರಕಾರದ ಯಾವ ಆರ್ಥಿಕ ಸೌಲಭ್ಯಗಳು ಈ ಕಲಾಶಾಲೆಗೆ ಸಿಗುತ್ತಿರಲಿಲ್ಲ.

ಅಕ್ಕಿಯವರಿಗೆ ಈ ಕಲಾಶಾಲೆಯ ನಿರ್ವಹಣೆ ಮಾಡುವುದು ದುಸ್ತರವಾಯಿತು. ಈಕಾರಣವಾಗಿ ಕಾಳೆಯವರು ಅನಿವಾರ್ಯವಾಗಿ ಸಂಡೂರಿಗೆ ಬರುವಂತಾಯಿತು. ಮುಂದೆ ಕೆಲವೇ ದಿನಗಳಲ್ಲಿ ಅಂದರೆ ೧೯೬೪ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನ ರೆಸಿಡೆನ್ಸಿಯಲ್ ಸ್ಕೂಲಿನಲ್ಲಿ ಕಲಾಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಮುಂದೆ ೧೯೯೨ ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದರೂ ಸಂಡೂರಿನಲ್ಲಿಯೇ ತಮ್ಮ ನಿವೃತ್ತಿ ದಿನಗಳನ್ನು ಕ್ರಿಯಾಶೀಲರಾಗಿ ಕಳೆಯುತ್ತಿದ್ದಾರೆ.

ತಮ್ಮ ಆಯುಷ್ಯದ ಬಹುಪಾಲು ವೇಳೆ ಕಲಾಚಟುವಟಿಕೆ, ಕಲಾಕೃತಿ ರಚನೆಯಲ್ಲಿ ಸವೆಸಿದ್ದು ಸಂಡೂರಿನಲ್ಲಿಯೇ. ಇದು ಅವರ ವೃತ್ತಿ ಜೀವನದ ದ್ವಿತೀಯ ಹಂತವಾಗಿದೆ. ಸಂಡೂರಿನಲ್ಲಿ ಆಂಗ್ಲ ಮಾಧ್ಯಮದ ಶಾಲೆಯಲ್ಲಿ ಇಂಗ್ಲಿಷನ್ನು ಕಲಿತು ಅಲ್ಲಿಯ ಮಕ್ಕಳಿಗೆ ಚಿತ್ರಕಲೆಯನ್ನು ಕಲಿಸುವಲ್ಲಿ ಪ್ರಾರಂಭಿಕ ಹಂತದಲ್ಲಿ ತಾವು ತುಂಬಾ ಪರಿಶ್ರಮಪಟ್ಟಿದ್ದನ್ನು ಈಗಲೂ ಕಾಳೆಯವರು ನೆನಪಿಸಿ ಕೊಳ್ಳುತ್ತಾರೆ.

ನಿವೃತ್ತಿಯ ದಿನಗಳು

ಚಲನಶೀಲ ವ್ಯಕ್ತಿತ್ವ ಉಳ್ಳವರಿಗೆ ನಿವೃತ್ತಿಯ ನಂತರವೇ ನಿಜವಾದ ಬದುಕು ಆರಂಭ ವಾಗುತ್ತದೆ. ವೈಯಕ್ತಿಕ ಭಾವನೆಗಳ ನಿರಂತರ ಅಭಿವ್ಯಕ್ತಿಗೆ ವೃತ್ತಿಯೊಂದು ತೊಡಕಾಗಿ ಅಂತಹವರಿಗೆ ಕಂಡು ಬರುತ್ತದೆ. ಈ ಮಾತು ಕಾಳೆಯವರಿಗೆ ಹೆಚ್ಚು ಅನ್ವಯವಾಗುತ್ತದೆ.

ವಿ.ಟಿ.ಕಾಳೆಯವರು ಸಂಡೂರಿನಲ್ಲಿ ೧೯೯೨ರಲ್ಲಿ ತಮ್ಮ ಕಲಾಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿದರೂ ಮತ್ತೆ ಐದು ವರ್ಷ ಇವರನ್ನು ಘೋರ್ಪಡೆಯವರು ತಮ್ಮ ಸಂಸ್ಥೆಯಲ್ಲಿ ಉಳಿಸಿಕೊಂಡರು. ಈ ಸಂದರ್ಭದಲ್ಲಿ ಕಾಳೆಯವರಿಂದ ಮಹತ್ವದ ಕಲಾಕೃತಿಗಳನ್ನು ಮಾಡಿಸಿಕೊಂಡು ತಮ್ಮ ಅರಮನೆಯಲ್ಲಿ ಸಂಗ್ರಹಿಸಿದ್ದಾರೆ. "ಈಗ ನಿವೃತ್ತಿಯ ನಂತರ ಕಲಾಕೃತಿಗಳನ್ನು ರಚಿಸಲು ನನಗೆ ಹೆಚ್ಚಿನ ಸಮಯ ದೊರಕುತ್ತಿದೆ. ಸೇವೆಯಲ್ಲಿದ್ದಾಗ ದೊರಕುತ್ತಿದ್ದ ಸ್ವಲ್ಪ ವೇಳೆ ನನ್ನ ಕಲಾಕೃತಿಗಳ ರಚನೆಗೆ ಸಾಕಾಗುತ್ತಿರಲಿಲ್ಲ. ಆದರೆ ಈಗ ನಾನು ಕಲಾಕೃತಿ ರಚನೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡಿ ರುವುದರಿಂದ ಸಮಯ ಕಳೆದದ್ದೇ ಗೊತ್ತಾಗುತ್ತಿಲ್ಲ" ಎಂದು ಕಾಳೆಯವರು ಹೇಳುತ್ತಾರೆ.

ಕಲಾಕೃತಿ ರಚನೆಯಲ್ಲಿ ಅವರಿಗಾಗುವ ಸಂತೋಷದ ದಣಿವನ್ನು ಅವರ ಪುಟ್ಟ ಮೊಮ್ಮಕ್ಕಳು ಹೋಗಲಾಡಿಸುತ್ತಾರಂತೆ. ಅವರೊಂದಿಗೆ ಹರಟೆ, ಆಟವಾಡುವ ಕಾಳೆಯವರು ಮಕ್ಕಳೊಂದಿಗೆ ಮಕ್ಕಳಾಗಿ ಬೆರೆಯುವ ಹೃದಯ ಶ್ರೀಮಂತಿಕೆಯನ್ನು ಹೊಂದಿದ್ದಾರೆ.

ವೆಂಕಟೇಶ ತುಳಜಾರಾಮ ಕಾಳೆಯವರದು ಧರ್ಮಪತ್ನಿ ಶ್ರೀಮತಿ ಕಾಶಿಬಾಯಿ, ಮಕ್ಕಳಾದ ಕಾರ್ತಿಕ್, ಕಾಶೀನಾಥ, ಶ್ರೀನಾಥ ಮತ್ತು ಆರುಜನ ಹೆಣ್ಣುಮಕ್ಕಳ ಸುಖೀಕುಟುಂಬ. ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ ಅವರನ್ನು ನಾಡಿನ ಸತ್‌ಪ್ರಜೆಗಳನ್ನಾಗಿ ಮಾಡುವಲ್ಲಿ ಕಾಳೆಯವರು ಹಿಂದೆ ಬಿದ್ದಿಲ್ಲ. ಕಾರ್ತಿಕನು ಬಿ.ಕಾಂ., ಪಿ.ಜಿ.ಡಿಪ್ಲೊಮಾವರೆಗೆ ಶಿಕ್ಷಣ ಪಡೆದುಕೊಂಡಿದ್ದರೆ, ಕಾಶೀನಾಥನು ಎ.ಎಂ.ಜಿ.ಡಿ. ಮತ್ತು ಶ್ರೀನಾಥನು ಬಿ.ಎಫ್.ಎ. ಪದವಿಗಳನ್ನು ಪಡೆದುಕೊಂಡಿದ್ದಾರೆ. ತಂದೆಯಂತೆಯೇ ಅವರ ಮಕ್ಕಳು ಸಹಿತ ಕಲಾ ಬದುಕನ್ನೇ ಅಪ್ಪಿಕೊಂಡು ಕಲಾಕೃತಿ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಇವರು ಈಗಾಗಲೇ ಯುವ ಕಲಾವಿದರಾಗಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

ಕಲೆ, ಕಲೆಗಾಗಿ ಅಲ್ಲ ಅದು ಸಮಾಜಕ್ಕಾಗಿ ಎನ್ನುವ ಸಿದ್ಧಾಂತ ನಂಬಿಕೊಂಡಿರುವ

ಕಾಳೆಯವರು ಸಮಾಜಮುಖಿ ಬದುಕನ್ನು ರೂಪಿಸಿಕೊಂಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು, ಜನರು ಇವರಿಂದ ಕಲಾಕೃತಿಗಳನ್ನು ಮಾಡಿಸಿಕೊಳ್ಳಲು ಸಾಲುಗಟ್ಟಿ ನಿಂತಿರುವುದನ್ನು ಸ್ವತಹ ಕಂಡಿದ್ದೇನೆ. ನಿವೃತ್ತಿಯ ನಂತರವೂ ಬಿಡುವಿಲ್ಲದಂತೆ ಕೆಲಸ ಮಾಡುತ್ತಿರುವ ಕಾಳೆಯವರು ಉತ್ತಮ ಆರೋಗ್ಯವನ್ನು ಹೊಂದಿದ್ದಾರೆ. ನಿಯಮಿತವಾದ ಆಹಾರ, ವಿಹಾರ, ಉತ್ತಮ ಸ್ನೇಹಿತರ ಒಡನಾಟ, ಒಳ್ಳೆಯ ಆರೋಗ್ಯಕರ ಹವ್ಯಾಸಗಳು ಅವರನ್ನು ಇನ್ನೂ ಯುವಕರನ್ನಾಗಿ ಮಾಡಿವೆ.

ಸಂಡೂರಿನ ಯಾವುದೇ ಸಾಂಸ್ಕೃತಿಕ ಚಟುವಟಿಕೆ ಇದ್ದರೂ ಅಲ್ಲಿ ಕಾಳೆಯವರು ಇರುತ್ತಾರೆ. ಅವರ ಮಾರ್ಗದರ್ಶನವಿರುತ್ತದೆ. ಅವರ ಕಲಾತ್ಮಕ ಮನಸ್ಸು ವಿನೂತನವಾಗಿ ಅಲ್ಲಿ ಕೆಲಸ ಮಾಡಿಕೊಂಡಿರುತ್ತದೆ. ಸಮಾಜದ ಜನರೊಂದಿಗೆ ಇರುವ ಇವರ ಒಡನಾಟದಿಂದಾಗಿ ಕಾಳೆಯವರು ತಮ್ಮ ಬದುಕನ್ನು ಹೆಚ್ಚು ಸುಂದರಗೊಳಿಸಿಕೊಂಡಿದ್ದಾರೆ. ಅಲ್ಲದೆ ಹತ್ತು ಹಲವು ಕ್ಷೇತ್ರದ ವಿದ್ವಾಂಸರೊಂದಿಗೆ ಇರುವ ಸ್ನೇಹದಿಂದಾಗಿ ವೈವಿಧ್ಯಮಯವಾದ ಜ್ಞಾನವನ್ನು ಪಡೆದುಕೊಂಡಿದ್ದಾರೆ. ಆ ಜ್ಞಾನದ ಹರವು ಹಲವಾರು ಕ್ಷೇತ್ರಗಳಲ್ಲಿ ಹರಿದು ಬಂದಿದೆ.

ಮಾಗಿದ ಅವರ ವಯಸ್ಸು, ಪಡೆದ ಲೋಕಾನುಭವ ದೃಷ್ಟಿ ಮತ್ತು ಅನುಭವಗಳು ಅನುಭಾವವಾಗಿ ಪರಿವರ್ತನೆ ಗೊಂಡಿರುವುದು ಅವರ ಜೀವನಪದ್ಧತಿಯಿಂದ ತಿಳಿದುಬರುವುದಲ್ಲದೇ ಅವರ ಕಲಾಕೃತಿಗಳ ವ್ಯವಸ್ಥಿತ ಅಧ್ಯಯನವೂ ಈ ದಿಸೆಯಲ್ಲಿಯೇ ನಡೆಯಬೇಕಾಗಿದೆ.

ಕಲಾಕೃತಿರಚನೆಯಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದರೂ ಪ್ರಚಾರದಿಂದ ಬಹಳಷ್ಟು ದೂರ ಇರುವವರು ಕಾಳೆಯವರು. ಚಿತ್ರಗಳ ಮೂಲಕ, ಅಭಿನಯ ಮತ್ತು ಸಾಹಿತ್ಯದ ಮೂಲಕ ಕಲೆಯ ಪರಿಮಳವನ್ನು ಬೀರಿದ ಸಾಧಕರಾಗಿದ್ದಾರೆ. ಇವರೊಬ್ಬ ಶಿಸ್ತಿನ ಸಿಪಾಯಿ. ಯಾವ ವಿಷಯದಲ್ಲಿಯೇ ಆಗಲಿ ಇವರದು ತುಂಬಾ ಅಚ್ಚುಕಟ್ಟುತನದ ಕೆಲಸ. ಹಾಗೆಯೇ ಸುಸ್ವಭಾವದ ಕಾಳೆಯವರು ಹಟವಾದಿ ಮತ್ತು ಸ್ನೇಹಜೀವಿಗಳು. ಮಕ್ಕಳಿಂದ ಹಿಡಿದು ಮುದುಕರವರೆಗೂ ಇವರ ಸ್ನೇಹದ ಹರವು ವ್ಯಾಪಿಸಿಕೊಂಡಿದೆ. ಸಮಾಜದ ಎಲ್ಲ ವರ್ಗ, ಪಂಗಡದ ಜನ ಇವರನ್ನು, ಇವರ ಕಲಾಸಾಧನೆಯನ್ನು ಗೌರವಿಸುವ ರೀತಿ ಯಾರನ್ನಾದರೂ ಬೆರಗುಗೊಳಿಸುವಂತಹುದು.

ಕಲಾ ಚಟುವಟಿಕೆಗಳು

ವಿ.ಟಿ.ಕಾಳೆಯವರದು ಕಲೆಗಾಗಿ ಅರ್ಪಿಸಿಕೊಂಡ ಬದುಕು. ಅವರ ಕಲಾಸೇವೆ, ಕಲಾ ಚಟುವಟಿಕೆಗಳು ಹತ್ತು ಹಲವು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ವಿದ್ಯಾರ್ಥಿಗಳ ಕಲಾಪ್ರತಿಭೆ ವಿಕಾಸಗೊಳ್ಳಲು ಮಕ್ಕಳ ಚಿತ್ರಕಲಾ ಸ್ಪರ್ಧೆ ಮತ್ತು ಪ್ರದರ್ಶನಗಳು, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಚಿಲ್ಡ್ರನ್ ಕಾಂಪಿಟೇಶನ್‌ಗಳು, ರಾಜ್ಯಮಟ್ಟದಲ್ಲಿ ನಡೆಸುವ ಕಲಾಪರೀಕ್ಷೆಗಳನ್ನು ಪ್ರತಿವರ್ಷವೂ ನಡೆಸುತ್ತ ಬಂದಿದ್ದಾರೆ. ಇದರ ಜೊತೆಯಾಗಿ ಇನ್ನಿತರ ಸ್ಥಳೀಯ ಮತ್ತು ಜಿಲ್ಲಾ ಹಾಗೂ ತಾಲೂಕುಮಟ್ಟದ ಕಲಾಪ್ರದರ್ಶನ ಸ್ಪರ್ಧೆಗಳನ್ನು ನಡೆಸುವುದರ ಮೂಲಕ ಕಲೆಯ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಾ ಬಂದಿದ್ದಾರೆ.

ಕಾಳೆಯವರು ರಾಜ್ಯ, ರಾಷ್ಟ್ರಮಟ್ಟದ ಕಾರ್ಯಾಗಾರ, ವಿಚಾರ ಸಂಕಿರಣ, ಕಲಾಶಿಬಿರಗಳಲ್ಲಿ ತಾವು ಒಬ್ಬ ಕಲಾವಿದರಾಗಿ, ತಜ್ಞರಾಗಿ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡದ್ದು ಮಾತ್ರವಲ್ಲದೇ ಶ್ರೇಷ್ಠಮಟ್ಟದ ಕಲಾಕೃತಿಗಳನ್ನು ನಿರ್ಮಾಣ ಮಾಡಿದ್ದಾರೆ. ಅವುಗಳಲ್ಲಿ ಪ್ರಮುಖ ವಾದ ಕೆಲವನ್ನು ಇಲ್ಲಿ ಹೆಸರಿಸಬಹುದು.

೧೯೮೧ರಲ್ಲಿ ಹಂಪಿಯಲ್ಲಿ ನಡೆದ ಹಿರಿಯ ಕಲಾವಿದರ ಕಲಾಶಿಬಿರ, ೧೯೮೩ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಕಲಾಶಿಬಿರ, ೧೯೯೩ರಲ್ಲಿ ಮಡಿಕೇರಿಯಲ್ಲಿ ನಡೆದ ಸಮಕಾಲೀನ ಕಲಾಶಿಬಿರ, ಲಲಿತಕಲಾ ಅಕಾಡೆಮಿಯ ಅನೇಕ ಕಲಾಶಿಬಿರಗಳು, ಇತ್ತೀಚಿನ ಹೊಸದುರ್ಗ ಸಮೀಪದ ಸಾಣೆಹಳ್ಳಿಯಲ್ಲಿಯ ಕಲಾಶಿಬಿರ, ಹುಬ್ಬಳ್ಳಿ, ಧಾರವಾಡ, ಮಡಿಕೇರಿ, ಗದಗ, ಮೈಸೂರು, ಹೈದ್ರಾಬಾದ್, ಬೆಂಗಳೂರು, ವಿಜಾಪುರ, ಬೀಳಗಿ, ಸಂಡೂರು, ಬಾಂಬೆ ಹೀಗೆ ಹಲವಾರು ಸ್ಥಳಗಳಲ್ಲಿ ಇವರು ಕಲಾಕೃತಿಗಳನ್ನು ನಿರ್ಮಾಣ ಮಾಡಿದ್ದಲ್ಲದೆ ಕಲಾವಿಮರ್ಶೆ, ಕಲಾಪ್ರದರ್ಶನ, ಕಲಾ ಬೆಳವಣಿಗೆಯ ಹಿನ್ನೆಲೆಯಲ್ಲಿ ವಹಿಸಿದ ಪಾತ್ರ ಅಪಾರವಾದುದು.

ರಾಜ್ಯ ಹಾಗೂ ರಾಷ್ಟ್ರಮಟ್ಟದ ಅನೇಕ ಸ್ಪರ್ಧೆಗಳಲ್ಲಿ ನಿರ್ಣಾಯಕರಾಗಿ ಮತ್ತು ಕಲಾ ಸಮ್ಮೇಳನ, ಕಲಾ ಶಿಬಿರಗಳ, ಕಲಾ ಪ್ರದರ್ಶನಗಳ ಸಂಘಟಿತರಾಗಿಯೂ, ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯು ನಡೆಸುತ್ತಿರುವ ಉಚ್ಚಕಲಾ ಪರೀಕ್ಷೆಗಳ ಕಾರ್ಯದಲ್ಲಿ ಪರೀಕ್ಷಕರಾಗಿ, ಮೌಲ್ಯಮಾಪಕರಾಗಿ, ತಪಾಸಣಾಧಿಕಾರಿಗಳಾಗಿ ಹೀಗೆ ಹತ್ತು ಹಲವು ಬಗೆಗಳಲ್ಲಿ ಅತ್ಯಂತ ಶ್ರದ್ಧೆಯಿಂದ ದುಡಿದ ವ್ಯಕ್ತಿತ್ವ ಇವರದು. ಯಾರೊಬ್ಬರೂ ಇವರ ಬಗ್ಗೆ ಬೆರಳು ತೋರಿಸದಂತೆ ಕಾರ್ಯ ನಿರ್ವಹಿಸಿದ ಚತುರತೆ ಇವರದಾಗಿದೆ.

ಕಾಳೆಯವರ ಕಲಾಕೃತಿಗಳು

ಸತ್‌ಕ್ರಿಯೆಯಿಂದ ಮನಸ್ಸು ಶುದ್ಧಿ, ಸದ್ವಿಚಾರದಿಂದ ಬುದ್ಧಿಯ ಶುದ್ಧಿ, ಅನುಭವದ ಭಾವದಿಂದ ಭಾವಶುದ್ಧಿ, ಆನಂದದಿಂದ ಆತ್ಮಶುದ್ಧಿ ಆಗುತ್ತದೆ. ಹಾಗೆಯೇ ದೇಹಪೋಷಕವಾದ ಅನ್ನಕ್ಕೆ ಮಹತ್ವ ಕೊಡುವ ನಾವು ಆತ್ಮ ಪೋಷಕವಾದ ಆನಂದಕ್ಕೆ ಹೆಚ್ಚು ಗಮನಹರಿಸಿಲ್ಲ. ಅದು ಲಲಿತಕಲೆಗಳಂತಹ ಮಾಧ್ಯಮಗಳಿಂದ ಮಾತ್ರ ಸಾಧ್ಯವಾಗುವಂತಹುದು. ಕಾಳೆಯವರ ಅಪಾರವಾದ ಕಲಾ ಕೃತಿಗಳನ್ನು ವೀಕ್ಷಿಸಿದಾಗ ಮೇಲಿನ ಮಾತುಗಳಿಗೆ ಉತ್ತರ ಸಿಗುತ್ತದೆ.

ಅಕಾಡೆಮಿಕ್ ಶೈಲಿಯ ಕಲಾಕೃತಿಗಳ ರಚನೆಯಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ಕಲಾವಿದ ವ್ಹಿ.ಟಿ.ಕಾಳೆಯವರು ಮೂಲತಃ ವ್ಯಾಕರಣಬದ್ಧ ಕಲಾಶಿಕ್ಷಣ ಪಡೆದವರು ಮತ್ತು ಅದರಲ್ಲೇ ಹೆಚ್ಚು ಒಲವು ಹೊಂದಿರುವುದು ಅವರ ಕಲಾಕೃತಿಗಳನ್ನು ನೋಡಿದಾಗ ಗ್ರಹಿಸಬಹುದು.

ಕಾಳೆಯವರ ಕಲಾಕೃತಿಗಳನ್ನು ಪ್ರಮುಖವಾಗಿ ಎಂಟು ರೀತಿಯಲ್ಲಿ ವಿಂಗಡಿಸಬಹುದು.

೧. ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳು; ೨. ದೇವತಾ ಚಿತ್ರಗಳು; ೩. ಸಂಯೋಜನಾ ಚಿತ್ರಗಳು; ೪. ನಿಸರ್ಗ ಚಿತ್ರಗಳು; ೫. ಭಿತ್ತಿ ಚಿತ್ರಗಳ ನಕಲು ಚಿತ್ರಗಳು; ೬. ನವ್ಯಶೈಲಿಯ ಸೃಜನಾತ್ಮಕ ಚಿತ್ರಗಳು; ೭. ರೇಖಾ ಚಿತ್ರಗಳು; ೮. ಶಿಲ್ಪಕಲಾಕೃತಿಗಳು

ಇವುಗಳನ್ನು ಸ್ಥೂಲವಾಗಿ ಇಲ್ಲಿ ನೋಡಬಹುದಾಗಿದೆ.

ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳು

ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳಲ್ಲಿ ಅಸಾಧಾರಣ ಸಾಧ್ಯತೆಗಳನ್ನು ಕಂಡುಕೊಂಡ ವ್ಹಿ.ಟಿ. ಕಾಳೆಯವರು ತಾವು ಚಿತ್ರಿಸಿದ ವ್ಯಕ್ತಿಗಳ ಜೊತೆಗೆ ಅವರ ವ್ಯಕ್ತಿತ್ವವನ್ನು ಕ್ಯಾನ್‌ವಾಸಿನ ಅವಕಾಶದಲ್ಲಿ ಒಡಮೂಡಿಸಿರುವುದು ಅವರಿಗೆ ಈ ಚಿತ್ರ ಪ್ರಕಾರದಲ್ಲಿ ಇರುವಂತಹ ಸಾಮರ್ಥ್ಯವನ್ನು ತೋರಿಸುತ್ತದೆ.

ವ್ಹಿ.ಟಿ.ಕಾಳೆಯವರು ರಚಿಸಿದ ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳು ಬಣ್ಣ ರೇಖೆಗಳಿಂದಲೇ

ರಚನೆಯಾಗಿದ್ದರೂ ಅವುಗಳಲ್ಲಿ ಮನುಷ್ಯ ಕಾಳಜಿ, ಮಾನವಿಕ ಸಂಬಂಧಗಳು, ಆ ಮೂಲಕ ಜೀವನ ಮೌಲ್ಯಗಳು ಮತ್ತು ಪರಂಪರೆಯನ್ನು ಬಿಂಬಿಸುವ ಅಂಶಗಳನ್ನು ಗುರುತಿಸಬಹುದು. ಮಹಾ ಪುರುಷರು, ಸ್ವಾಮಿಗಳು, ಹಿರಿಯರು, ಶ್ರೇಷ್ಠ ವ್ಯಕ್ತಿಗಳ ಚಿತ್ರಗಳನ್ನು ಇವರು ರಚನೆ ಮಾಡಿದ್ದಾರೆ. ಇದರಲ್ಲಿ ಹಲವು ಚಿತ್ರಗಳನ್ನು ಆಯಾವ್ಯಕ್ತಿಗಳನ್ನು ರೂಪದರ್ಶಿಗಳಾಗಿ ಕುಳ್ಳಿರಿಸಿಕೊಂಡು ರಚನೆ ಮಾಡಿದ್ದರೆ, ಮತ್ತೆ ಕೆಲವು ಚಿತ್ರಗಳನ್ನು ಫೋಟೋಗ್ರಾಫ್ (ಛಾಯಾಚಿತ್ರ) ನೋಡಿ ಅದಕ್ಕೆ ತಮ್ಮ ಅಭಿವ್ಯಕ್ತಿಯ ರೂಪಗಳನ್ನು ಕೊಟ್ಟಿದ್ದಾರೆ. ಮತ್ತೆ ಕೆಲವು ಚಿತ್ರಗಳಾದ ಬುದ್ಧ, ಬಸವಣ್ಣರಂತಹ ವಿಭೂತಿಪುರುಷರನ್ನು ಕಲ್ಪನೆಯ ಮೂಸೆಯಿಂದ ಸೃಜನಾತ್ಮಕತೆಯ ಸ್ಪರ್ಶಕೊಟ್ಟು ರಚಿಸಿರುವುದು ಗಮನಾರ್ಹವಾದುದಾಗಿದೆ.

ಇವರು ರಚಿಸಿದ ವ್ಯಕ್ತಿ ಚಿತ್ರಗಳಲ್ಲಿ ಕೆಲವು ಪ್ರಮುಖವಾಗಿವೆ. ಬುದ್ಧ, ಬಸವಣ್ಣ, ಅಂಬೇಡ್ಕರ್, ಹುಬ್ಬಳ್ಳಿಯ ಸಿದ್ಧಾರೂಢರು ಹಾಗೂ ಗುರುನಾಥಾರೂಢರು, ಗಂಗಾವತಿಯ ಶ್ರೀಚನ್ನಬಸವೇಶ್ವರರು ಹೀಗೆ ಅನೇಕ ಮಹಾಪುರುಷರ ಚಿತ್ರಗಳನ್ನು ಇವರು ಚಿತ್ರಿಸಿದ್ದಾರೆ. ಇದರ ಜೊತೆಗೆ ವ್ಯಾಪಾರಿ ಹಿನ್ನೆಲೆಯಲ್ಲಿ ಅನೇಕ ವೈವಿಧ್ಯಮಯ ಚಿತ್ರಗಳಲ್ಲೂ ವ್ಯಕ್ತಿ ಚಿತ್ರಗಳನ್ನು ಬಿಡಿಸಿದ್ದಾರೆ. ಸಂಡೂರಿನ ಎಮ್.ವಾಯ್.ಘೋರ್ಪಡೆಯವರ ಮನೆಯಲ್ಲಿ ಹಲವಾರು ಮಹತ್ವದ ವ್ಯಕ್ತಿ ಚಿತ್ರಗಳು ಮತ್ತು ಭಾವಚಿತ್ರಗಳನ್ನು ಕಾಳೆಯವರು ರಚಿಸಿದ್ದಾರೆ. ಇದರಂತೆಯೆ ಪಂಚಾಕ್ಷರಿ ಗವಾಯಿಗಳ ಆಶ್ರಮ ದಲ್ಲಿ ಪಂಡಿತ ಪಂಚಾಕ್ಷರಿ ಗವಾಯಿಗಳ ಭಾವಚಿತ್ರ, ಸಂಡೂರಿನ ವಿರಕ್ತಮಠ, ಪ್ರಭುಸ್ವಾಮಿಗಳ ಮಠದಲ್ಲಿ ಬಸವೇಶ್ವರರ ಚಿತ್ರ, ಎಚ್.ಜಿ.ರಾಮುಲು ಅವರ ಮನೆಯಲ್ಲಿ ಹಲವಾರು ವ್ಯಕ್ತಿಚಿತ್ರಗಳು ಇದ್ದು ಇವು ಲೈಫ್‌ಸೈಜ್ ದಲ್ಲಿವೆ. ಗಂಗಾವತಿಯಲ್ಲಿ ಚನ್ನಬಸವೇಶ್ವರ ಸ್ವಾಮಿಗಳ ಮಠದಲ್ಲಿ ಹತ್ತಾರು ವ್ಯಕ್ತಿಚಿತ್ರಗಳಿವೆ. ಜೈಸಿಂಗಪುರದ ಗೋಶಾಲೆಯಲ್ಲಿ ೬೦ ಪೋಟ್ರೆಟ್(ಭಾವಚಿತ್ರ)ಗಳನ್ನು ಕಾಳೆಯವರು ರಚನೆ ಮಾಡಿದ್ದಾರೆ. ಹಾಗೆಯೇ ಹೊಸಪೇಟೆಯ ಎಚ್.ಜಿ.ರಂಗನಗೌಡರ ಮನೆಯಲ್ಲಿ ಹತ್ತಾರು ಭಾವ ಚಿತ್ರಗಳಿವೆ, ಕಾಳೆಯವರು ಚಿತ್ರಿಸಿದ ಅನೇಕ ಪವಾಡಪುರುಷರ ಚಿತ್ರಗಳನ್ನು ಗದಗಿನ ಕೆ.ಎನ್.ಕಬಾಡಿಯವರು ವರ್ಣಮಾಧ್ಯಮದಲ್ಲಿ ಮುದ್ರಿಸಿ ಪ್ರಕಟಿಸಿದ್ದಾರೆ. ಹಟ್ಟಿ ಊರಿನ ಪ್ರಕಾಶಕರೊಬ್ಬರು ಕಾಳೆಯವರು ರಚಿಸಿದ ತಿಂಥಿಣಿ ಮೌನೇಶ್ವರರ ೩-೪ ನಮೂನೆಯ ವರ್ಣಚಿತ್ರವನ್ನು ಮುದ್ರಿಸಿ ಪ್ರಚಾರ ಮಾಡಿದ್ದಾರೆ. ಇನ್ನೂ ಅನೇಕ ಪ್ರಕಾಶಕರು ಇವರ ಕಲಾಕೃತಿಗಳನ್ನು ಪ್ರಕಟಿಸಿದ್ದಾರೆ. ಹೀಗೆ ಇವರ ಕಲಾಕೃತಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಯು.ಎಸ್.ಎ.ದ ಸೇಂಟ್ ಲೂಯಿಸ್ ಪಾರ್ಕ್‌ನ ನ್ಯಾಯಮೂರ್ತಿ ಹಾಗೂ ಅವರ ಪತ್ನಿಯ ಭಾವಚಿತ್ರಗಳನ್ನು ಇವರು ರಚಿಸಿದ್ದು ಅವು ಈಗ ಅವರ ಮನೆಯಲ್ಲಿ ಸಂಗ್ರಹವಾಗಿವೆ. ಹೀಗೆ ಕಾಳೆಯವರ ಅಸಂಖ್ಯಾತ ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳು ನಾಡಿನ ಉದ್ದಗಲಕ್ಕೂ ಹರಡಿಕೊಂಡಿವೆ. ಅವುಗಳ ವ್ಯವಸ್ಥಿತವಾದ ದಾಖಲಾತಿಯನ್ನು ಮಾಡಬೇಕಿದೆ.

ದೇವತಾ ಚಿತ್ರಗಳು

ವ್ಹಿ.ಟಿ.ಕಾಳೆಯವರ ದೇವತಾ ಚಿತ್ರಗಳು ಹೆಚ್ಚಾಗಿ ವಾಣಿಜ್ಯ ಮಾಧ್ಯಮದ ಹಿನ್ನೆಲೆಯಲ್ಲಿ ರಚನೆ ಯಾಗಿವೆ. ಈ ಚಿತ್ರಗಳಲ್ಲಿ ಅಕ್ಕಮಹಾದೇವಿ, ಮೌನೇಶ್ವರ, ವೀರಶೈವ ಮಹಾವೃಕ್ಷ, ರೇಣುಕಾದೇವಿ, ಬನಶಂಕರಿ ಮುಂತಾದ ಚಿತ್ರಗಳಲ್ಲಿ ಕಾಳೆಯವರ ಸೃಜನಶೀಲ ಪ್ರತಿಭೆ ಕೆಲಸ ಮಾಡಿದೆ.

ವಾಷ್‌ತಂತ್ರದಲ್ಲಿ ಚಿತ್ರಿಸಲಾದ 'ವರುಣ' ಕಲಾಕೃತಿಯು ಇವರ ದೇವತಾ ಚಿತ್ರಗಳಲ್ಲಿ

ಗಮನಸೆಳೆ ಯುವ ಉತ್ತಮ ಕೃತಿ(ವಾಷ್‌ತಂತ್ರದಲ್ಲಿ ವರ್ಣವನ್ನು ಮೊದಲು ಲೇಪಿಸುವುದು ನಂತರ ಅದನ್ನು ತೊಳೆದು ಮತ್ತೆ ಮತ್ತೆ ಅದರ ಮೇಲೆ ವರ್ಣವಿನ್ಯಾಸ ಮಾಡುವುದು ಈ ತಂತ್ರದ ವಿಶೇಷ). ಏಳು ಹಂಸಗಳನ್ನು ಹೂಡಿದ ರಥದಲ್ಲಿ ಕುಳಿತು ಪಯಣಿಸುತ್ತಿರುವ ವರುಣದೇವನು ನಾಲ್ಕು ಕೈಗಳನ್ನು ಹೊಂದಿ ಶಂಖ, ಚಕ್ರ, ಕಮಲ ಮತ್ತು ಕಲಶವನ್ನು ಹಿಡಿದುಕೊಂಡು ಪದ್ಮಾಸನದಲ್ಲಿ ಕುಳಿತಿದ್ದಾನೆ. ಇಲ್ಲಿಯ ಆಕರ್ಷಕಭಂಗಿ, ಮುಂದಸ್ಮಿತ ನಗು, ದೈವತ್ವದ ಕಳೆ ಅಲ್ಲದೆ ಚಿತ್ರದ ಶಾಸ್ತ್ರೋಕ್ತ ಪ್ರಮಾಣ, ತಾಳಮ್ಮೇಸಗಳು ಕಾಳೆಯವರ ಕಲಾಪ್ರಬುದ್ಧತೆಯನ್ನು ತೋರಿಸಿಕೊಡುತ್ತವೆ.

ಕಾಳೆಯವರು ವೇದ ಕಾಲದ ದೇವತೆಗಳ ಸರಣಿ ಚಿತ್ರಗಳನ್ನೇ ರಚಿಸಿದ್ದಾರೆ. ಸೂರ್ಯ, ಅಗ್ನಿ, ವರುಣ, ವಾಯು, ಇಂದ್ರ ಮೊದಲಾದ ದೇವತೆಗಳಲ್ಲದೇ ಮಾತೃದೇವತೆಗಳಾದ ವೈಷ್ಣವಿ, ಮಹೇಶ್ವರಿ, ಕೌಮಾರಿ, ಐಂದ್ರಿ, ಬ್ರಾಹ್ಮಿ, ಚಂಡಿ, ವಾರಾಹಿ, ನಾರಸಿಂಹಿ ಮುಂತಾದವುಗಳು ಪ್ರಮುಖವಾಗಿವೆ.

ಸಂಡೂರಿನ ಎಮ್.ವಾಯ್.ಘೋರ್ಪಡೆಯವರ ಮನೆಯಲ್ಲಿ ದೇವತಾ ಚಿತ್ರಗಳಾದ ದತ್ತಾತ್ರೇಯ, ಕಾಮಾಕ್ಷಿ, ಸತ್ಯನಾರಾಯಣ, ಸಂಡೂರಿನ ಶ್ರೀ ಕುಮಾರಸ್ವಾಮಿ, ಪಾರ್ವತೀ ದೇವಿ, ಪಳನಿಯಪ್ಪನ್ ಮೊದಲಾದವುಗಳಿವೆ. ಗದಗಿನ ಪಂಚಾಕ್ಷರಿ ಗವಾಯಿಗಳ ಆಶ್ರಮ, ಸಂಡೂರಿನ ವಿರಕ್ತಮಠ, ಪ್ರಭುಸ್ವಾಮಿಗಳ ಮಠ, ಗಂಗಾವತಿಯ ಚನ್ನಬಸವೇಶ್ವರಮಠ, ಜೈಸಿಂಗಪುರದ ಗೋಶಾಲೆ, ಹೊಸಪೇಟೆಯ ಎಚ್.ಜಿ. ರಂಗನಗೌಡ ಅವರ ಮನೆಯಲ್ಲಿ ಇವರು ರಚಿಸಿದ ದೇವತಾ ಚಿತ್ರಗಳಿವೆ. ಗದುಗಿನ ಸೋಮವಂಶದ ಸಹಸ್ರಾರ್ಜುನ ಕ್ಷತ್ರೀಯ ಸಮಾಜಕ್ಕೆ ಮಾಡಿಕೊಟ್ಟ ಸಹಸ್ರಾರ್ಜುನ ದೇವತಾ ವರ್ಣಚಿತ್ರ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಮುದ್ರಣಗೊಂಡು ಹೆಸರು ಮಾಡಿದ ಮೌಲಿಕ ಕೃತಿ. ಹೀಗೆ ನೂರಾರು ದೇವತಾಚಿತ್ರಗಳೂ ಹತ್ತು ಹಲವು ಬಗೆಯ ವಾಣಿಜ್ಯ ಮಾಧ್ಯಮದ ದೇವತಾ ಚಿತ್ರಗಳನ್ನು ವ್ಹಿ.ಟಿ. ಕಾಳೆಯವರು ರಚನೆ ಮಾಡಿದ್ದಾರೆ, ಮಾಡುತ್ತಿದ್ದಾರೆ ಸಹ.

"ಪ" (ಪಂಚಮ) / "Pa" (Panchama)

ಸಂಯೋಜನಾ ಚಿತ್ರಗಳು

ವ್ಹಿ.ಟಿ.ಕಾಳೆಯವರ ಸಂಯೋಜನಾ ಚಿತ್ರಗಳನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು. ರಾಗಮಾಲಾ ಚಿತ್ರಗಳು ಮತ್ತು ವಿಷಯಾಧಾರಿತ ಚಿತ್ರಗಳು.

ರಾಗಮಾಲಾ ಚಿತ್ರಗಳು : ರಾಗಮಾಲಾ ಚಿತ್ರಗಳ ಪರಂಪರೆ ನಮ್ಮ ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿದೆ. ವಿಷ್ಣುಧರ್ಮೋತ್ತರ, ಸಮರಾಂಗಣ ಸೂತ್ರಧಾರ, ಗ್ರಂಥಗಳಲ್ಲಿ ರಾಗಮಾಲಾ ಚಿತ್ರದ ಬಗ್ಗೆ ವಿವರಗಳಿವೆ. ಚಿತ್ರಕಾರನು ಎಷ್ಟು ಪ್ರಬುದ್ಧನಾಗಿ ಚಿತ್ರಿಸಬೇಕು ಎನ್ನುವುದನ್ನು ಹೇಳುವಾಗ, ಉತ್ತಮ ಸಂಗೀತವು ಕೇಳುಗನಲ್ಲಿ ಉಂಟುಮಾಡುವ ಭಾವ ತನ್ಮಯತೆಯು ಆತನ ಚಿತ್ರ ನೋಡಿದಾಗಲೂ ಉಂಟಾಗಬೇಕು. ಆ ರೀತಿಯಲ್ಲಿ ಚಿತ್ರ ರಚಿಸಬೇಕು ಎಂಬುದಾಗಿ ಸೂಚಿಸಲಾಗಿದೆ. ಮುಂದೆ ರಜಪೂತರ ಕಾಲಕ್ಕೆ ರಾಗಮಾಲಾ ಚಿತ್ರಗಳ ವಿಶೇಷ ಸರಣಿ ಚಿತ್ರಗಳು ರಚನೆಯಾಗಿವೆ. ಸಾಮಾನ್ಯವಾಗಿ ಭಾರತೀಯ ಕಿರುರೂಪ ಚಿತ್ರಕಲೆಯ ಹೆಚ್ಚಿನ ಶೈಲಿಗಳಲ್ಲಿ ರಾಗಮಾಲಾ ಚಿತ್ರಗಳು ಚಿತ್ರಾಂಕನಗೊಂಡಿರುವುದು ವಿಶೇಷ. ರಾಜಸ್ತಾನಿ, ಕಾಂಗ್ರಾ, ಬಸೋಲಿ, ಬುಂದಿ, ಮೇವಾರ ಮುಂತಾದವುಗಳಲ್ಲದೆ ದಕ್ಷಿಣದಲ್ಲಿ ವಿಜಾಪುರ ಸುಲ್ತಾನರು, ಮೈಸೂರು ಅರಸರು, ತಂಜಾವೂರು ನಾಯಕರು ಮುಂತಾದ ಅರಸರ ಕಾಲದಲ್ಲಿ ರಾಗಮಾಲಾ ಚಿತ್ರಗಳ ರಚನೆಯಾಗಿರುವುದು ಕಂಡುಬರುತ್ತದೆ.

ರಾಗಮಾಲಾ ಚಿತ್ರಗಳೆಂದರೆ, ನಿರ್ದಿಷ್ಟವಾದ ಸಂಗೀತ ರಾಗ ಒಂದನ್ನು ಕೇಳಿದಾಗ ಉಂಟಾಗುವ ಭಾವತನ್ಮಯತೆ. ನಿರ್ದಿಷ್ಟವಾದ ಚಿತ್ರಕೃತಿಯನ್ನು ನೋಡಿದಾಗಲೂ ಉಂಟಾಗುವಂತೆ ಚಿತ್ರ ರಚಿಸುವುದಾಗಿದೆ. ಪ್ರತಿ ರಾಗಕ್ಕೂ ತನ್ನದೇ ಆದ ಗುಣ ವಿಶೇಷತೆಗಳಿವೆ. ಅವು ಆಯಾ ರಾಗದ ಚಿತ್ರಣದಲ್ಲಿ ಅಭಿವ್ಯಕ್ತವಾಗಬೇಕು. ಸಂಗೀತದ ಏರಿಳಿತದಿಂದ ಉಂಟಾಗುವ ತರಂಗಗಳ ಆತ್ಯಂತಿಕವಾದ ನಾದಲೋಕವು ಚಿತ್ರಕೃತಿಯಲ್ಲಿನ ರೇಖಾ ವಿನ್ಯಾಸ, ಸಂಯೋಜನಾ ಕೌಶಲ್ಯ ಮತ್ತು ವರ್ಣವಿನ್ಯಾಸದ ಹೊಂದಾಣಿಕೆಯಿಂದ ಉಂಟಾಗುವ ಅನುಭವಗಮ್ಯವಾದ ನೋಟಗಳು ನೋಡುಗನಲ್ಲಿ ಪ್ರತಿಬಿಂಬಿತವಾಗಬೇಕು.

ಡಾ. ಎಂ.ವ್ಹಿ.ಮಿಣಜಗಿಯವರು ಕರ್ನಾಟಕದಲ್ಲಿ ರಾಗಮಾಲಾ ಚಿತ್ರಗಳನ್ನು ಮೊದಲು ರಚಿಸಿದ ಖ್ಯಾತಿಗೆ ಪಾತ್ರರಾಗಿದ್ದಾರೆ. ಈ ಬಗೆಯ ರಾಗಮಾಲಾ ಚಿತ್ರಗಳ ರಚನೆಯನ್ನು ವ್ಹಿ.ಟಿ.ಕಾಳೆಯವರು ಮುಂದುವರಿಸಿದ್ದಾರೆ. ಇವರು ಮಿಣಜಗಿಯವರು ಚಿತ್ರಿಸಿದ ರಾಗಗಳನ್ನು ಹೊರತುಪಡಿಸಿ ಬೇರೆ ರಾಗಗಳ ಕಲಾಕೃತಿ ರಚಿಸಿದ್ದಾರೆ. ರಾಗಮಾಲಾ ಚಿತ್ರಗಳ ರಚನೆಗೆ ಸಂಗೀತ ಕಲೆಯ ಜ್ಞಾನ ಅವಶ್ಯವಾಗಿರಬೇಕು. ಜೊತೆಗೆ ಚಿತ್ರಕಲೆಯ ಪರಿಜ್ಞಾನವೂ ಇರಬೇಕು. ಅಂದಾಗ ಮಾತ್ರ ಪರಿಣಾಮಕಾರಿಯಾದ ರಾಗಮಾಲಾ ಚಿತ್ರರಚನೆ ಸಾಧ್ಯವಾಗುತ್ತದೆ. ಕಾಳೆಯವರು ಒಬ್ಬ ಉತ್ತಮ ಚಿತ್ರಕಾರರು ಮಾತ್ರವಲ್ಲದೇ ಸಂಗೀತದ ಜ್ಞಾನವನ್ನು ಪಡೆದು ಕೊಂಡಿರುವ ಕಲಾವಿದ. ಹೀಗಾಗಿ ಉತ್ತಮ ಮಟ್ಟದ ರಾಗಮಾಲಾ ಚಿತ್ರಗಳನ್ನು ರಚಿಸಲು ಸಾಧ್ಯವಾಗಿದೆ. ಗದುಗಿನ ವಿಜಯ ಕಲಾಮಂದಿರಲ್ಲಿ ಒಂದು ಸಂಗೀತದ ವಿಭಾಗವಿತ್ತು. ಅಲ್ಲಿ ಸಂಗೀತಗಾರರ ಒಡನಾಟದಿಂದ ಈ ರೀತಿಯ ಕಲಾಕೃತಿ ರಚನೆಗೆ ಸಾಧ್ಯವಾಯಿತು. ರಾಜೀವ ಪುರಂದರೆ, ಬಸವರಾಜ ಮನ್ಸೂರ್, ಮರೋಳ ರಾಮಣ್ಣನವರು, ಪಂಡಿತ್ ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ವಿಠ್ಠಲ ಸಾ ಕಬಾಡಿ ಇನ್ನೂ ಹಲವಾರು ಸಂಗೀತಗಾರರ ಸಂಪರ್ಕ ಬಂದಿತು. ಇವರು ರಚಿಸಿದ ರಾಗಮಾಲಾ ಚಿತ್ರಗಳಲ್ಲಿ ಹಲವಾರು ಚಿತ್ರಗಳು ಪ್ರಸಿದ್ಧವಾಗಿವೆ. ರಾಗ ಬಾಗೇಶ್ರೀ, ರಾಗ ಬಸಂತ, ರಾಗ ಧನಶ್ರೀ, ರಾಗ ಕೇದಾರ, ರಾಗ ದರ್ಬಾರಿ ಕಾನಡಾ, ರಾಗ ಭೈರವಿ ಇತ್ಯಾದಿಗಳು ಪ್ರಸಿದ್ಧವಾಗಿವೆ. ಹಾಗೆಯೇ ಪ್ರತಿ ಸ್ವರಗಳ ರೂಪಚಿತ್ರಣವನ್ನು ಚಿತ್ರಿಸುವ ಸಪ್ತಸ್ವರಗಳ ವರ್ಣಚಿತ್ರಗಳು ಕಾಳೆಯವರು ಕಲಾಲೋಕಕ್ಕೆ ನೀಡಿದ ಅಪರೂಪದ ಕೊಡುಗೆಗಳು. ಇಲ್ಲಿ ಅವರ ಅಧ್ಯಯನದ ಆಳ, ಕುಂಚದ ಹಾಸುಬೀಸುಗಳು ಯಾರ ಗಮನ ವನ್ನಾದರೂ ಸೆಳೆಯುತ್ತವೆ.

ವ್ಹಿ.ಟಿ.ಕಾಳೆಯವರು ಸಂಗೀತದ ರಾಗಗಳನ್ನು ಕುರಿತಾದ ರಾಗಮಾಲಾ ಚಿತ್ರಗಳನ್ನು ರಚಿಸಿದಂತೆಯೇ ತಾತ್ವಿಕ ಹಿನ್ನೆಲೆಯಲ್ಲೂ ಚಿತ್ರ ರಚನೆ ಮಾಡಿ ತಾವೊಬ್ಬ ತತ್ತ್ವಶಾಸ್ತ್ರದಲ್ಲಿ ಒಲವುಳ್ಳ ಕಲಾವಿದರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಭಾರತೀಯ ತತ್ತ್ವಜ್ಞಾನದ ಹಿನ್ನೆಲೆಯಲ್ಲಿರುವ ಒಂದುದಿನದ ನಾಲ್ಕು ಪ್ರಹರಗಳಿಗೆ ಅನುಸಾರವಾಗಿ ಉಷಾ, ದಿವಾ, ಸಂಧ್ಯಾ ಹಾಗೂ ನಿಶಾ ಎಂಬುದಾಗಿ ಒಂದೊಂದು ಪ್ರಹರಕ್ಕೆ ಒಂದೊಂದು ಚಿತ್ರವನ್ನು ಕಾಳೆಯವರು ರಚನೆ ಮಾಡಿದ್ದಾರೆ. ಕಾಳೆಯವರ ಕಲ್ಪನೆಯ ಪರಾಕಾಷ್ಠತೆಯನ್ನು ಈ ಚಿತ್ರಗಳು ಸಾಬೀತುಪಡಿಸುತ್ತವೆ. ಈ ಚಿತ್ರಕೃತಿಗಳು ದಿನದ ಆಯಾ ಪ್ರಹರಗಳಲ್ಲಿ ಉಂಟು ಮಾಡುವ ಅನುಭವವನ್ನು ಅವರು ದೃಶ್ಯಮಾಧ್ಯಮದಲ್ಲಿ ಹಿಡಿದಿಡುವ ರೀತಿ ಚೇತೋಹಾರಿಯಾದುದು. ಹಾಗೆಯೇ ವರ್ಣವಿನ್ಯಾಸದ ವಿವಿಧತೆಯಿಂದ ವಿಭಿನ್ನವಾದ ಅನುಭವವೊಂದು ಇಲ್ಲೆಲ್ಲ ಅನಾವರಣಗೊಂಡಿದೆ.

ವಿಷಯಾಧಾರಿತ ಚಿತ್ರಗಳು : ವ್ಹಿ.ಟಿ.ಕಾಳೆಯವರು ರಚಿಸಿದ ಸಂಯೋಜನಾ ಚಿತ್ರಗಳಲ್ಲಿ ಒಂದೊಂದು ವಿಷಯವನ್ನು ಆಧರಿಸಿ ರಚಿಸಿದ ಚಿತ್ರಗಳು ಹಲವಾರು ಇವೆ. ಅವುಗಳಲ್ಲಿ ಪ್ರಮುಖವಾಗಿರುವ ಕೃತಿಗಳು ಡೆತ್, ಪಿಕ್‌ನಿಕ್ ಪಾರ್ಟಿ, ದಿಗೋಟ್ಸ್, ಚಂದ್ರಮಂಚಕೆ ಬಾ ಚಕೋರಿ, ಡಿಸ್ಕಾರ್ಡ್, ಪ್ರಣಯಕ್ಕೆ ಮೊದಲು, ಆಶ್ವಾಸನೆಗಳ ಶಿಲುಬೆಯಲ್ಲಿ, ಉಮರ್ ಖಯಾಮ್, ದಿ ಟ್ರೆಡಿಷನ್, ಮ್ಯಾಡ್ ಆಫ್ಟರ್ ದಿ ಮೂನ್ ಹೀಗೆ ಅವರೇ ಹೆಸರಿಟ್ಟ ಚಿತ್ರಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಕಾಳೆಯವರ ಸಂಯೋಜನಾ ಚಿತ್ರಗಳಲ್ಲಿ ಮೇಲುನೋಟಕ್ಕೆ ಪರಂಪರೆಯ ಮುಂದುವರಿಕೆ ದಟ್ಟವಾಗಿರುವಂತೆ ಕಂಡುಬಂದರೂ ಸೂಕ್ಷ್ಮವಾಗಿ ಗಮನಿಸಿದಾಗ ಸಮಕಾಲೀನತೆಯ ಸ್ಪರ್ಶವು ಅಲ್ಲಿ ಗೋಚರವಾಗುತ್ತದೆ. ಇವರ ಈ ಕೃತಿಗಳಲ್ಲಿ ಅಜಂತಾ, ರಜಪೂತ ಹಾಗೂ ಬಂಗಾಲಿ ಚಿತ್ರಶೈಲಿಗಳ ತಂತ್ರದ ದಟ್ಟ ಪ್ರಭಾವವನ್ನು ಗುರುತಿಸಬಹುದಾಗಿದೆ. ಅಲ್ಲದೇ ಅವರ ಕೆಲವು ಕೃತಿಗಳಲ್ಲಿ ಬಂಗಾಲದ ಕಲಾವಿದ ಅಬ್ದುಲ್ ರಹಮಾನ್ ಚುಗ್ತಾಯ್, ಕ್ಷಿತೀಂದ್ರನಾಥ ಮಜುಮ್‌ದಾರ್ ಅವರ ಪ್ರಭಾವ ಇರುವದನ್ನು ಸ್ವತಹ ಕಾಳೆಯವರೆ ಒಪ್ಪಿಕೊಳ್ಳುತ್ತಾರೆ.

ನಿಸರ್ಗ ಚಿತ್ರಗಳು

ನಿಸರ್ಗ ದೃಶ್ಯಗಳನ್ನು ಯಥಾವತ್ತಾಗಿ ಚಿತ್ರಿಸುವುದು ಸಾಮಾನ್ಯವಾಗಿ ಪಾಶ್ಚಾತ್ಯಶೈಲಿಯಲ್ಲಿ ಕಂಡು ಬಂದರೆ, ನಿಸರ್ಗದ ಸೌಂದರ್ಯವನ್ನು ಅನುಭವಿಸಿ ಅದರಿಂದುಂಟಾಗುವ ಭಾವತೀವ್ರತೆಗಳನ್ನು ಅಭಿವ್ಯಕ್ತಪಡಿಸುವುದು ಭಾರತೀಯ ಕಲಾಪರಂಪರೆಯಾಗಿದೆ. ಭಾರತೀಯ ಕಿರುರೂಪ ಚಿತ್ರಗಳಲ್ಲಿ ಇದಕ್ಕೆ ಸ್ಪಷ್ಟವಾದ ನಿದರ್ಶನ ಕಂಡುಬರುತ್ತದೆ. ವ್ಹಿ.ಟಿ.ಕಾಳೆಯವರ ನಿಸರ್ಗ ಚಿತ್ರರಚನಾ ಪದ್ಧತಿಯು ಪಾಶ್ಚಾತ್ಯವಾಗಿದ್ದರೂ ಆ ದೃಶ್ಯವನ್ನು ಅವರು ಅನುಭವಿಸಿ ಚಿತ್ರಿಸುವಲ್ಲಿ, ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವಲ್ಲಿ, ವರ್ಣವಿನ್ಯಾಸ ಮಾಡುವಲ್ಲಿ ಆಕಾರಗಳನ್ನು ಪುನರ್‌ರೂಪಿಸಿಕೊಂಡು ಸಂಯೋಜನೆ ಗೊಳಿಸುವಲ್ಲಿ, ಮನಸ್ಸಿನ ತುಡಿತಗಳನ್ನು ಕಲಾಕೃತಿಯಲ್ಲಿ ಬೆಸೆಯುವಲ್ಲಿ ಭಾರತೀಯತೆಯ ಪ್ರಭಾವ ಅವರಲ್ಲಿ ಕಂಡುಬರುತ್ತದೆ.

ನಮ್ಮಲ್ಲಿ ಕೆ.ವೆಂಕಟಪ್ಪ, ಎನ್.ಹನುಮಯ್ಯ ಇವರು ನಿಸರ್ಗ ಚಿತ್ರರಚನೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಪ್ರಸಿದ್ಧರಾಗಿದ್ದಾರೆ. ವೆಂಕಟಪ್ಪ ಹೆಚ್ಚಾಗಿ ಜಲವರ್ಣ ಮಾಧ್ಯಮದಲ್ಲಿ ನೈಜ ಶೈಲಿಯಲ್ಲಿ ಚಿತ್ರಿಸುವುದನ್ನು ರೂಢಿಸಿಕೊಂಡಿದ್ದರೆ, ಹನುಮಯ್ಯನವರು ತೈಲವರ್ಣ ಮಾಧ್ಯಮ ದಿಂದ ನಿಸರ್ಗ ದೃಶ್ಯಗಳಲ್ಲಿ ಭಾವನೆಗಳನ್ನು ಕೆಣಕುವಂತೆ ಚಿತ್ರಿಸಿದ್ದಾರೆ. ಈ ಇಬ್ಬರು ಹಿರಿಯ ಕಲಾವಿದರ ಶೈಲಿಗಿಂತ ಭಿನ್ನವಾದ, ಒಂದು ರೀತಿಯಲ್ಲಿ ರೋಮ್ಯಾಂಟಿಕ್ ಎನ್ನಬಹುದಾದ ಶೈಲಿಯಲ್ಲಿ ವ್ಹಿ.ಟಿ.ಕಾಳೆಯವರ ನಿಸರ್ಗ ಚಿತ್ರಗಳು ಗೋಚರಿಸುತ್ತವೆ.

ಕಾಳೆಯವರ ಆಸಕ್ತಿಯ ಕ್ಷೇತ್ರಗಳಲ್ಲಿ ಒಂದಾದ ನಿಸರ್ಗ ಚಿತ್ರರಚನೆಯಲ್ಲಿ ಅವರದೇ ಆದ ವಿಭಿನ್ನ ಶೈಲಿಯ ಕುಂಚದ ಬೀಸುಗಳು, ವರ್ಣಸಂಯೋಜನೆ, ಆಕಾರಗಳ ಹೊಂದಾಣಿಕೆ, ಸ್ಥಳದ ಆಯ್ಕೆ, ಮುಂತಾದ ಅಂಶಗಳು ಅವರೊಬ್ಬ ಉತ್ತಮ ನಿಸರ್ಗ ಚಿತ್ರಕಾರರು ಎಂಬುದನ್ನು ತೋರಿಸಿ ಕೊಡುತ್ತವೆ. ಇವರು ರಚನೆಮಾಡಿರುವ ಅನೇಕ ನಿಸರ್ಗಚಿತ್ರಗಳಲ್ಲಿ ಧರ್ಮಸ್ಥಳದ ಮಹಾದ್ವಾರ, ಶ್ರವಣಬೆಳಗೊಳದ ಮಾನಸ್ತಂಭ, ಚಂದ್ರಗಿರಿಯ ದೃಶ್ಯ, ಇಂದ್ರಗಿರಿಯ ನೋಟ, ಸಂಡೂರು ಹಾಗೂ ಸುತ್ತಮುತ್ತಲಿನ ಅನೇಕ ನಿಸರ್ಗರಮ್ಯ ತಾಣಗಳು, ಮಡಿಕೇರಿಯ ಸುಂದರ ದೃಶ್ಯಗಳು, ಗೋವಾ ಕಡಲತೀರದ ರಮ್ಯ ನೋಟಗಳು ಪ್ರಮುಖವಾಗಿವೆ. ಅಲ್ಲದೇ ತೈಲ ವರ್ಣದಲ್ಲಿ ಚಿತ್ರಿತವಾದ ಹಂಪಿಯ ಕಲ್ಲಿನ ತೇರು, ಕಮಲ್ ಮಹಲ್, ವಾಚ್ ಟವರ್, ಜೈನ ಮಂದಿರ ಹಾಗೂ ಸಂಡೂರಿನ ಹರಿಶಂಕರ ಗುತ್ತಿಯ ಕೋಟೆ ಮುಂತಾದವುಗಳನ್ನು ಹೆಸರಿಸಬಹುದು.

ಗೋವಾ ಕಡಲತೀರದ ಆಕರ್ಷಕ ದೃಶ್ಯಗಳ ಕೆಲವು ಚಿತ್ರಗಳು ಗದಗ ವಿಜಯ ಕಲಾಮಂದಿರ ದಲ್ಲಿ ಇವೆ. ಈ ಕೃತಿಗಳನ್ನು ತೈಲವರ್ಣದಿಂದ ಕಾರ್ಡ್‌ಬೋರ್ಡ್ ಫಲಕದ ಮೇಲೆ ರಚನೆ

ಮಾಡಲಾಗಿದೆ. ಇಲ್ಲಿನ ಚಿತ್ರ ಒಂದರಲ್ಲಿ ಒಂದು ಬದಿಗೆ ವಿಶಾಲವಾದ ನೀಲವರ್ಣದ ಸಾಗರವಿದೆ. ಅದರಲ್ಲಿ ಏರಿಳಿಯುವ ಅಲೆಗಳು, ಮೇಲೆ ತೇಲುವ ಹಡಗುಗಳು, ನೀಲನಭದಲ್ಲಿ ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳು, ಬಿಳಿ ಮೋಡಗಳು ರಚನೆಯಾಗಿವೆ. ಇನ್ನೊಂದು ಕಡೆಗೆ ಕಡಲಿಗೆ ಅಂಟಿಕೊಂಡಂತೆ ಇರುವ ಹಸಿರು ಹೊದ್ದ ಕಡಲತೀರ, ಆಕಾಶಕ್ಕೆ ಮುತ್ತು ಕೊಡುತ್ತಿರುವಂತೆ ಬೆಳೆದಿರುವ ಫಲಭರಿತ ತೆಂಗಿನ ಮರಗಳು, ವಿವಿಧ ಗಿಡ ಬಳ್ಳಿಗಳು ರಚನೆಯಾಗಿವೆ. ಇದೊಂದು ನೈಜಶೈಲಿಯ ಕಲಾಕೃತಿಯಾಗಿದ್ದು ಯಥಾದರ್ಶನ ತತ್ತ್ವಗಳಿಗೆ ಅನುಸಾರವಾಗಿ ರಚನೆಯಾದಂತಹ ಕೃತಿಯಾಗಿದೆ. ಇಲ್ಲಿ ರೇಖಾ ವಿನ್ಯಾಸ ಪ್ರಮುಖವಾಗಿರದೇ ಕುಂಚದಿಂದ ಎಳೆದ ಬಣ್ಣದ ಎಳೆತಗಳೇ ಆಯಾ ಆಕಾರಗಳನ್ನು ಪೂರ್ಣಗೊಳಿಸಿದಂತೆ ಭಾಸವಾಗುತ್ತದೆ.

ಭಿತ್ತಿಚಿತ್ರಗಳ ನಕಲು ಚಿತ್ರಗಳು

ವ್ಹಿ.ಟಿ.ಕಾಳೆಯವರು ಪ್ರಾಚೀನ ಪರಂಪರೆಯನ್ನು ಬಿಂಬಿಸುವ ಭಿತ್ತಿಚಿತ್ರಗಳ ನಕಲು ಮಾಡುವ ಮೂಲಕ ನಮ್ಮ ಭವ್ಯ ಭಿತ್ತಿಚಿತ್ರಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ.

೧೯೭೮ ರಲ್ಲಿ ಕೆ.ಕೆ.ಹೆಬ್ಬಾರ್ ಅವರು ರಾಜ್ಯ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಶ್ರವಣಬೆಳಗೊಳದ ಭಿತ್ತಿಚಿತ್ರಗಳನ್ನು ನಕಲುಮಾಡಲು ಎಸ್.ಎಸ್.ಕುಕ್ಕೆ, ವೈ.ಸುಬ್ರಹ್ಮಣ್ಯರಾಜು, ಎಂ.ಎ.ಚೆಟ್ಟಿ, ಎಸ್.ಆರ್.ಸ್ವಾಮಿ, ಎಸ್.ಕಾಳಪ್ಪ ಮುಂತಾದವರ ಜೊತೆ ವ್ಹಿ.ಟಿ.ಕಾಳೆಯವರನ್ನೂ ನೇಮಿಸ ಲಾಗಿತ್ತು. ನಾಶವಾಗುತ್ತಿದ್ದ ಆ ಭಿತ್ತಿಚಿತ್ರಗಳನ್ನು ಸುಂದರವಾಗಿ ನಕಲು ಮಾಡಿಕೊಡಲು ಈ ತಂಡವನ್ನು ಆಯ್ಕೆ ಮಾಡಿತ್ತು.

ಅದೇ ರೀತಿ ೧೯೮೨ರಲ್ಲಿ ತುಮಕೂರು ಜಿಲ್ಲೆಯ ಸಿರಾದ ಶ್ರೀ ರೇವಣಸಿದ್ದೇಶ್ವರ ದೇವಾಲಯದ ಭಿತ್ತಿಚಿತ್ರಗಳನ್ನು ಎಂ.ಇ.ಗುರು, ಸುಬ್ರಹ್ಮಣ್ಯರಾಜು, ಎಂ.ಎಸ್.ಚಂದ್ರಶೇಖರ ಮತ್ತು ವ್ಹಿ.ಟಿ.ಕಾಳೆಯವರು ಸೇರಿ ನಕಲು ಮಾಡಿ ಅಕಾಡೆಮಿಗೆ ಕೊಟ್ಟಿದ್ದಾರೆ. ಈ ಭಿತ್ತಿಚಿತ್ರಗಳ ರಚನೆಯಲ್ಲಿ ಮೂಲ ಚಿತ್ರಗಳ ಯಥಾ ರೂಪವಿದೆ. ಭಿತ್ತಿಚಿತ್ರಗಳ ಮೂಲ ಗುಣಲಕ್ಷಣಗಳನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದಿರುವುದು ಅಷ್ಟೇ ಮಹತ್ವದ ಅಂಶವಾಗಿದೆ.

ನವ್ಯಶೈಲಿಯ ಸೃಜನಾತ್ಮಕ ಚಿತ್ರಗಳು

ಕಾಳೆಯವರು ನವ್ಯಶೈಲಿಯಲ್ಲಿಯೂ ಅನೇಕ ಸೃಜನಶೀಲ ಕಲಾಕೃತಿಗಳನ್ನು ರಚಿಸಿದ್ದಾರೆ. ಭಾರತೀಯ ಹಾಗೂ ಪಾಶ್ಚಾತ್ಯ ಕಲೆಯ ಇತಿಹಾಸವನ್ನು ಅಧ್ಯಯನ ಮಾಡಿದ ಇವರು ಆಧುನಿಕ ಕಲಾ ಸಿದ್ಧಾಂತಗಳನ್ನು ಸಾಕಷ್ಟು ಅಭ್ಯಸಿಸಿದ್ದಾರೆ. ಅದರಿಂದಾಗಿಯೇ ಅವರು ನವ್ಯ ಶೈಲಿಯ ಕೃತಿಗಳ ರಚನೆಯಲ್ಲಿ ಅನೇಕ ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಇವರ ನವ್ಯ ಶೈಲಿಯ ಕಲಾಕೃತಿಗಳ ವಸ್ತು, ಆಶಯ, ಶೈಲಿ ಮತ್ತು ತಂತ್ರಗಳ ದೃಷ್ಟಿಯಿಂದ ನೋಡಿದರೆ ಸಮಕಾಲೀನತೆಯ ಚಿಂತನೆಯಿಂದ ಕೂಡಿವೆ. ಸಾಂಪ್ರದಾಯಿಕ ಮತ್ತು ಸಮಕಾಲೀನ ಎರಡೂ ಸಂದರ್ಭದ ಹಂತದಲ್ಲಿ ಆಯಾ ಸಮಯ ಸಂದರ್ಭ ಮತ್ತು ಬೇಡಿಕೆಯ ಹಿನ್ನಲೆಯಲ್ಲಿ ಕಾಳೆಯವರ ಕಲಾಕೃತಿ ರಚನೆ ಈಗಲೂ ನಡೆಯುತ್ತಲೇ ಇದೆ. ಇಲ್ಲಿ ಹಲವಾರು ಅಮೂರ್ತ ಚಿತ್ರಗಳ ಸರಣಿಚಿತ್ರಗಳು ರಚನೆಯಾಗಿವೆ. ವಿಶೇಷವಾಗಿ ಹೆಸರಿಸಬಹುದಾದ ಆಕೃತಿ

ಆಕೃತಿಗಳು, ಬಣ್ಣಗಳು / Forms, Colours



ಮತ್ತು ಬಣ್ಣಗಳ ಸರಣಿಚಿತ್ರಗಳು ಗಮನಾರ್ಹವಾಗಿವೆ. ಸಮಕಾಲೀನ ಸಂದರ್ಭದ ಅನೇಕ ತಂತ್ರಗಳನ್ನು ಕಾಳೆಯವವರು ಇಲ್ಲಿ ಸಮರ್ಪಕವಾಗಿ ದುಡಿಸಿಕೊಂಡಿದ್ದಾರೆ.

ರೇಖಾ ಚಿತ್ರಗಳು

ಕಾಳೆಯವರ ರೇಖಾ ಚಿತ್ರಗಳದೇ ಒಂದು ವಿಶೇಷವಾದ ಅಧ್ಯಯನವಾಗುವಂತಹ ವಿಷಯ ವಸ್ತು ವನ್ನು ಹೊಂದಿದ ಕಲಾಪ್ರಕಾರವೆನ್ನಬಹುದು. ಅವರ ರೇಖಾಚಿತ್ರಗಳನ್ನು ಎರಡು ರೀತಿಯಲ್ಲಿ ವಿಂಗಡಿಸ ಬಹುದಾಗಿದೆ. ಒಂದು ಅಧ್ಯಯನದ ಅವಧಿಯಲ್ಲಿ ಮತ್ತು ದಿನನಿತ್ಯದ ಅಭ್ಯಾಸಕ್ಕಾಗಿ (ಪ್ರಾಕ್ಟೀಸ್‌ಗಾಗಿ) ರಚಿಸುವ ಕಲಾಕೃತಿಗಳು. ಇನ್ನೊಂದು ರೀತಿಯದು ವರ್ಣ ಕಲಾಕೃತಿ ನಿರ್ಮಾಣದ ಸಲುವಾಗಿ ಪೂರ್ವ ಭಾವಿಯಾಗಿ ಮಾಡಿಕೊಳ್ಳುವ (ಸ್ಕೆಚ್ಚು) ಆಲೇಖ್ಯಗಳು. ಇವುಗಳಲ್ಲದೆ ಅಸಂಖ್ಯಾತ ಗ್ರಂಥಗಳಿಗೆ ಸಂದರ್ಭ ರೇಖಾಚಿತ್ರಗಳನ್ನು ಚಿತ್ರಿಸಿ ಕೊಟ್ಟಿದ್ದಾರೆ. ಮತ್ತು ಮುಖಪುಟಗಳಿಗೆ ವರ್ಣವಿನ್ಯಾಸದ ಚಿತ್ರಗಳನ್ನು ಮಾಡಿದ್ದಾರೆ. ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ಸಮಿತಿಯವರು ಪ್ರಕಟಿಸಿದ ಪಠ್ಯಪುಸ್ತಕ ಗಳಿಗಾಗಿ ಸಾವಿರಾರು ರೇಖಾಚಿತ್ರಗಳನ್ನು ರಚಿಸಿ ಕೊಟ್ಟಿದ್ದಾರೆ. ಇವರು ವಿಶೇಷವಾಗಿ ತೊಗಲು ಗೊಂಬೆಯಾಟದ ಕಲಾವಿದರಿಗೆ ಸಾಂಪ್ರದಾಯಿಕ ಶೈಲಿಯಲ್ಲಿ ನೂರಾರು ರೇಖಾಚಿತ್ರಗಳನ್ನು ಇತ್ತೀಚೆಗೆ ರಚಿಸಿದ್ದು, ಅವು ತುಂಬಾ ಜನಪ್ರಿಯತೆಯನ್ನು ಗಳಿಸಿವೆ. ಹೀಗೆಯೇ ಐತಿಹಾಸಿಕ ಅವಶೇಷಗಳ ಮೂರ್ತಿ ಶಿಲ್ಪಗಳ ಸಾವಿರಾರು ರೇಖಾಚಿತ್ರಗಳನ್ನು ರಚಿಸಿದ್ದು ಉಲ್ಲೇಖನೀಯ. ರೇಖಾಚಿತ್ರ ಗಳಲ್ಲಿಯೂ ಇವರದು ದೊಡ್ಡ ಹೆಸರು.

ಶಿಲ್ಪ ಕಲಾಕೃತಿಗಳು

ಕಾಳೆಯವರು ಕೇವಲ ವರ್ಣಚಿತ್ರ ಕಲಾವಿದರಷ್ಟೇ ಅಲ್ಲ, ಒಬ್ಬ ಉತ್ತಮ ಶಿಲ್ಪಿಯೂ ಆಗಿದ್ದಾರೆಂದರೆ ಅಚ್ಚರಿ ಪಡಬೇಕಿಲ್ಲ. ಸಿಮೆಂಟ್, ಮಣ್ಣು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮುಂತಾದ ಮಾಧ್ಯಮಗಳಲ್ಲಿ ಇವರು ಶಿಲ್ಪ ರಚಿಸಿದ್ದಾರೆ. ಇವರ ಶಿಲ್ಪಗಳು ಎರಡು ರೀತಿಯಲ್ಲಿವೆ. ಫಲಕದ ಮೇಲೆ ರಚಿಸಿದ ಉಬ್ಬು ಶಿಲ್ಪಗಳು ಮತ್ತು ತ್ರಿಆಯಾಮದ ಶಿಲ್ಪಗಳು ಪ್ರಮುಖವಾಗಿವೆ. ಇವರ ಶಿಲ್ಪಗಳಲ್ಲಿ ಅಂಬೇಡ್ಕರ್, ಬಸವಣ್ಣ, ಮಠಾಧೀಶರು, ಸಾಧುಸಂತರ, ಮಹಾಪುರುಷರ ಭಾವ ಶಿಲ್ಪಗಳು ಪ್ರಮುಖವಾಗಿದ್ದು ಇವುಗಳ ಕುರಿತಾಗಿ ಪ್ರತ್ಯೇಕ ಅಧ್ಯಯನದ ಅವಶ್ಯಕತೆ ಇದೆ.

ಮಯೂರ / Peacock

ಬರಹಗಾರರಾಗಿ ವಿ.ಟಿ.ಕಾಳೆ

ಚಿತ್ರಕಲಾವಿದರು ಉತ್ತಮಮಟ್ಟದ ಬರಹಗಾರರಾಗಿರುವುದು ವಿರಳ. ಅಂತಹ ವಿರಳರ ಸಾಲಿಗೆ ಕಾಳೆಯವರು ಸೇರುತ್ತಾರೆ. ರವೀಂದ್ರನಾಥ ಟ್ಯಾಗೋರ್, ಪಿ.ಆರ್.ತಿಪ್ಪೇಸ್ವಾಮಿ, ಡಾ.ಬಿ.ಕೆ.ಹಿರೇಮಠ ರಂತಹವರು ಕಲಾವಿದರಾಗಿದ್ದುಕೊಂಡೇ ಉತ್ತಮ ಸಾಹಿತ್ಯವನ್ನೂ ರಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಳೆಯವರು ವಿವಿಧ ಪ್ರಕಾರದ ಸಾಹಿತ್ಯ ರಚನೆ ಮಾಡಿರುವುದು ಅವರ ಬಹುಮುಖ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯೆನ್ನಬಹುದು.

ಕಲಾಕೃತಿ ರಚನಾಕಾರರು ಕಲಾ ಸಾಹಿತ್ಯವನ್ನು ರಚಿಸುವುದು ತುಂಬಾ ಅಪರೂಪ. ಇತ್ತೀಚೆಗೆ ಕೆಲ ಯುವ ಕಲಾವಿದ ಸಂಶೋಧಕರು ಚಿತ್ರಕಲೆಯಲ್ಲಿ ಡಾಕ್ಟರೇಟ್ ಪದವಿ ಪಡೆದುಕೊಂಡು ಕಲಾ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಅಂದಿನ ದಿನಗಳಲ್ಲಿ ಕಲಾವಿದರು ಕಲಾ ಸಾಹಿತ್ಯ ರಚಿಸುವುದು ಒಂದು ಆಶ್ಚರ್ಯಕರವಾದ ಸಂಗತಿಯೇ ಆಗಿತ್ತು. ಇಂತಹ ಒಂದು ಸಾಧನೆ ವಿ.ಟಿ.ಕಾಳೆಯವರಂತಹವರಿಗೆ ಮಾತ್ರ ಸಾಧ್ಯವೆನ್ನಬಹುದು.

ಕಾಳೆಯವರು ರಚಿಸಿದ ಕಲಾ ಸಾಹಿತ್ಯವನ್ನು ಕಲೆ, ಕಲಾ ಇತಿಹಾಸ, ಕಲಾಶಿಕ್ಷಣ, ಸಂಪಾದನೆ, ಜೀವನ ಚಿತ್ರಗಳು ಎಂಬುದಾಗಿ ಸ್ಥೂಲವಾಗಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ.

ಇವರ ಮೊದಲ ಕಲಾಗ್ರಂಥ 'ಚಿತ್ರಕಲಾ ಪರಿಚಯ'. ಚಿತ್ರಕಲಾ ವಿದ್ಯಾರ್ಥಿಗಳಿಗೆ, ಕಲಾ ಶಿಕ್ಷಕರಿಗೆ ಮತ್ತು ಚಿತ್ರಕಲೆಯನ್ನು ಕುರಿತು ಪ್ರಾಥಮಿಕವಾಗಿ ತಿಳಿದುಕೊಳ್ಳಬೇಕೆನ್ನುವವರಿಗೆಲ್ಲಾ ಉಪಯುಕ್ತ ಮಾಹಿತಿಯು ಇದರಲ್ಲಿ ದೊರಕುತ್ತದೆ. ಕನ್ನಡದಲ್ಲಿ ಚಿತ್ರಕಲಾ ಅಧ್ಯಯನದ ಕುರಿತು ಬಂದ ಬಹು ಮೌಲ್ಯ ಕೃತಿಗಳಲ್ಲಿ ಇದೂ ಒಂದು. ಇಂದಿಗೂ ಕೂಡ ಇದೊಂದು ಮಾರ್ಗದರ್ಶಿ ಕೃತಿ.

'ಚಿತ್ರಕಲಾ ದರ್ಪಣ' ಎಂಬುದು ಇವರ ಇನ್ನೊಂದು ಮಹತ್ವದ ಗ್ರಂಥ. ಇದರಲ್ಲಿ ಕಲಾ ಇತಿಹಾಸ, ಕಲಾ ಶಿಕ್ಷಣ, ಚಿತ್ರಕಲೆಯ ಪರಿಕರಗಳು, ದೇಶ ವಿದೇಶಗಳ ವಿವಿಧ ಚಿತ್ರಕಲಾ ಸಂಪ್ರದಾಯ, ಕಲಾವಿದರ ಕಲಾಕೃತಿಗಳ, ವಿವಿಧ ಪಾರಿಭಾಷಿಕ ಪದಗಳ ಅರ್ಥವಿವರಣೆ ಯೊಂದಿಗೆ ಕಲೆಯ ಬೋಧನಾ ವಿಧಾನಗಳ ಕುರಿತು ಮಹತ್ವದ ಮಾಹಿತಿಗಳನ್ನು ಕಲೆಹಾಕಿ ಬಿಡಿ ಬಿಡಿಯಾಗಿ, ಅಷ್ಟೇ ಸಂಕ್ಷಿಪ್ತವಾಗಿ ಮಾಹಿತಿಯನ್ನು ಒದಗಿಸುವ ಪ್ರಯತ್ನ ಈ ಗ್ರಂಥ ದಲ್ಲಿದೆ. ಇದು ಕರ್ನಾಟಕ ಲಲಿತಕಲಾ ಅಕಾಡೆಮಿ ಯಿಂದ ಪ್ರಕಟಗೊಂಡಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿದ 'ಕಲಾಕೋಶ' ಎಂಬ ಬೃಹತ್ ಕಲಾಗ್ರಂಥದ ಸಂಪಾದಕರಲ್ಲಿ ಇವರು ಇಬ್ಬರು. ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ ಕಲಾವಿದರ ಜೀವನ ಮತ್ತು ಕಲಾಕೃತಿಗಳ ಕುರಿತು ಪುಸ್ತಕಗಳನ್ನು ರಚಿಸಿ ಕೊಟ್ಟಿದ್ದಾರೆ. 'ಎಸ್.ಎಂ.ಪಂಡಿತ್', 'ಶಿವಾನಂದ ಟಿ. ಅಕ್ಕಿ', 'ಟಿ.ಪಿ.ಅಕ್ಕಿ' ಎಂಬ ಮೂರು ಪುಸ್ತಕಗಳು ಗಮನಾರ್ಹವಾಗಿ ಈ ಸಾಲಿಗೆ ಸೇರುತ್ತವೆ.

ನಾಟಕ ಕ್ಷೇತ್ರದಲ್ಲಿ ಚಿಕ್ಕಮ್ಮ, ಸಂತ ಕಬೀರ ಇತ್ಯಾದಿ ಪೂರ್ಣಾವಧಿಯ ನಾಟಕಗಳು, ವೇಷಧಾರಿ, ಗಾಳಿಗೋಪುರ ಮುಂತಾದ ಏಕಾಂಕಗಳು, ಸುಪ್ರಿಯೆ, ಪಲ್ಲವಿ ಇತ್ಯಾದಿ ಗೀತನಾಟಕ ಗಳಲ್ಲದೆ ದೇಶಭಕ್ತಿಗೀತೆಗಳು ಮತ್ತು ಭಾವಗೀತೆಗಳನ್ನು ರಚಿಸಿದ್ದಾರೆ. ನಾಟಕಗಳೆಲ್ಲ ಯಶಸ್ವೀ ಪ್ರಯೋಗಗಳಾಗಿದ್ದ ಜನಪ್ರಿಯವಾಗಿವೆ.

ನಾಟಕ ಕ್ಷೇತ್ರದಲ್ಲಿ

ಹಲವಾರು ವರ್ಷಗಳಿಂದ ಕಾಳೆಯವರು ನಟರಾಗಿ, ನಿರ್ದೇಶಕರಾಗಿ ರಂಗಭೂಮಿಯ ಪ್ರಸಾದನ ಕಲೆಯ ಕಲಾವಿದರಾಗಿ ಸಲ್ಲಿಸಿದ ಸೇವೆ ಅಪಾರವಾದುದು. ಇದಕ್ಕಾಗಿ ಅವರು ವಿಶೇಷವಾಗಿ ಗುಬ್ಬಿ ಕಂಪನಿ, ಪಂಚಾಕ್ಷರಿ ಗವಾಯಿಗಳ ಕಂಪನಿ, ಮೃಡದೇವ ಗವಾಯಿಗಳ ಕಂಪನಿ ಹಾಗೂ ನ್ಯಾಮತಿ ಶಾಂತಪ್ಪನವರ ಕಂಪನಿಗಳಲ್ಲಿ ಎರಡು ವರ್ಷಗಳ ಅನುಭವವನ್ನು ಸಹ ಪಡೆದು ಬಂದಿದ್ದಾರೆ.

ಕಲಾ ಶೈಕ್ಷಣಿಕ ಸೇವೆ

ಕಾಳೆಯವರು ಒಬ್ಬ ಕಲಾವಿದ, ಕಲಾ ಶಿಕ್ಷಕ, ಕಲಾ ವಿಮರ್ಶಕನಾಗಿ ಅಷ್ಟೇ ಉಳಿಯಲಿಲ್ಲ. ಇನ್ನುಳಿದ ಪೂರಕ ಕ್ಷೇತ್ರಗಳಲ್ಲಿಯೂ ಸೇವೆಸಲ್ಲಿಸುವ ಮೂಲಕ ತಾವೊಬ್ಬ ಬಹುಮುಖ ಪ್ರತಿಭೆಯ ಚಿಂತಕ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಕರ್ನಾಟಕ ಸರಕಾರದ ಪಠ್ಯಪುಸ್ತಕಗಳಿಗೆ ಚಿತ್ರಕಾರರಾಗಿ, ಕರ್ನಾಟಕ ರಾಜ್ಯದ ಶೈಕ್ಷಣಿಕ ನಿರ್ದೇಶನಾಲಯ ಮತ್ತು ತರಬೇತಿ ಸಂಸ್ಥೆಯವರು ನಡೆಸಿದ ಪ್ರಾಥಮಿಕ ಶಿಕ್ಷಣದ ಪಠ್ಯವಸ್ತು ನವೀಕರಣ ಕಾರ್ಯದಲ್ಲಿ ಚಿತ್ರಕಾರನಾಗಿ,

ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ಅನೌಪಚಾರಿಕ ಶಿಕ್ಷಣದ ಪಠ್ಯವಸ್ತುಗಳಿಗೆ ಚಿತ್ರಕಾರನಾಗಿ ಸಲ್ಲಿಸಿದ ಸೇವೆ ಅಪಾರ. ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಅವಕಾಶ, ಕೇಂದ್ರ ಸರಕಾರದ ಮಹತ್ವದ ಶೈಕ್ಷಣಿಕ ಯೋಜನೆಯಲ್ಲಿ ಮುಖ್ಯ ಚಿತ್ರಕಾರನಾಗಿ, ಚಿತ್ರಕಲಾವಿದರಿಗೆ ತರಬೇತಿದಾರರಿಗೆ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿದ ಅನುಭವ ಇವರದು.

ಕೇಂದ್ರ ಸರಕಾರದ ಯೋಜನೆಯಾಗಿದ್ದ (CAPE) ರಾಜ್ಯ ಸಲಹಾಸಮಿತಿಯ ಸದಸ್ಯರಾಗಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ಸರಕಾರದ ನೂತನ ಪಠ್ಯಕ್ರಮ ರಚನಾ ಸಮಿತಿಯ ಸದಸ್ಯರಾಗಿ, ಚಿತ್ರಕಲಾ ಶಿಕ್ಷಣವು ಪಠ್ಯ ವಸ್ತುವಿನಲ್ಲಿ ಸ್ಥಾನ ಪಡೆಯಲು ಇವರು ಸಾಕಷ್ಟು ಪರಿಶ್ರಮ ವಹಿಸಿದ್ದಾರೆ. ಕಲಾಶಿಕ್ಷಣಕ್ಕೆ ಒಂದು ಒಳ್ಳೆಯ ಸ್ಥಾನ ಸಿಗಬೇಕೆಂಬ ಉದ್ದೇಶ ಹೊಂದಿದ ಕಾಳೆಯವರು ತಮಗೆ ಸಿಕ್ಕ ಅವಕಾಶವನ್ನು ಕಲೆಯ ಉಳಿವಿಕೆ ಮತ್ತು ಬೆಳವಣಿಗೆಗಾಗಿ ಸರಿಯಾಗಿ ಬಳಸಿಕೊಂಡು ಕಾರ್ಯ ಮಾಡಿದ ತೃಪ್ತಿ ಇವರದಾಗಿದೆ. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ಚಿತ್ರಕಲಾ ಪಠ್ಯಕ್ರಮದ ಬಗ್ಗೆ ಇವರು ವಹಿಸಿದ ಕಳಕಳಿ, ಕಾಳಜಿಗಳು ಅನನ್ಯವಾದವುಗಳು.

ಒಟ್ಟಾರೆ ವಿ.ಟಿ.ಕಾಳೆಯವರು ನಮ್ಮ ಸಂದರ್ಭದ ನವೋದಯ, ನವ್ಯ, ನವ್ಯೋತ್ತರ ಸಂದರ್ಭದ ಗಮನಾರ್ಹ ಚಿತ್ರಕಲಾವಿದರು, ಶಿಲ್ಪಿಗಳು, ಕಲಾಶಿಕ್ಷಕರು, ಕಲಾಬರಹಗಾರರೂ ಅಲ್ಲದೆ ನಾಟಕ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿರಿಯ ತಲೆಮಾರಿನ ಅಪರೂಪದ ಕೊಂಡಿ. ಹರಿದು ಹಂಚಿಹೋಗಿರುವ ಇವರ ಎಲ್ಲ ಕಲಾಕೃತಿಗಳ ಡಾಕ್ಯುಮೆಂಟರಿ ಕೆಲಸ ಮತ್ತು ವ್ಯವಸ್ಥಿತವಾದ ಅಧ್ಯಯನ ತುರ್ತಾಗಿ ನಡೆಯಬೇಕಾಗಿದೆ. ಯಾವ ಕಾಲಕ್ಕೂ ಸಲ್ಲುವ ಇವರ ಎಲ್ಲ ಪ್ರಕಾರದ ಕಲಾ ಶೈಲಿಗಳ ಕಲಾಕೃತಿಗಳ ರಚನೆಯ ಕಾರ್ಯ ಈಗಲೂ ನಡೆದಿದೆ. ಅವರಿಂದ ಇನ್ನೂ ಉತ್ತಮೋತ್ತಮ ಕಲಾಕೃತಿಗಳು ಹೊರಬರಲಿ ಹಾಗೆಯೇ ಅವರಿಗೆ ಉನ್ನತ ಗೌರವ ಸ್ಥಾನಮಾನಗಳು ಸಮಾಜ, ಸರಕಾರ, ಸಂಘ ಸಂಸ್ಥೆಗಳಿಂದ ಸಲ್ಲುವಂತಾಗಲಿ ಎಂಬುದು ನಮ್ಮೆಲ್ಲರ ಬಯಕೆ.

■■

ವೈಯಕ್ತಿಕ ಪರಿಚಯ

ಹೆಸರು	:	ವಿ.ಟಿ.ಕಾಳೆ
ಜನನ	:	೧೯೩೪ ಬಾಗಲಕೋಟೆ ಜಿಲ್ಲೆಯ ಹುನಗುಂದ
ಪ್ರಾಥಮಿಕ ಶಿಕ್ಷಣ	:	ಹುನಗುಂದ ಮತ್ತು ಗದಗ
ಪ್ರೌಢ ಶಿಕ್ಷಣ	:	ಗದಗ
ಕಲಾಶಿಕ್ಷಣ	:	ಗದಗಿನ ಮುನಿಸಿಪಲ್ ಹೈಸ್ಕೂಲಿನಲ್ಲಿ ಎಲೆಮೆಂಟರಿ ಮತ್ತು ಇಂಟರ್ ಮೀಡಿಯೆಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳು. • ಮುಂಬಯಿ ಸರಕಾರವು ನಡೆಸುತ್ತಿದ್ದ ಈ ಪರೀಕ್ಷೆಗಳಲ್ಲಿ ಎಲಿಮೆಂಟರಿ ಡ್ರಾಯಿಂಗ್ ಗ್ರೇಡ್‌ನಲ್ಲಿ ಮೂರು ಹಾಗೂ ಇಂಟರ್‌ಮೀಡಿಯೆಟ್‌ನಲ್ಲಿ ಎರಡು ಬಹುಮಾನಗಳು.
ಉಚ್ಚ ಕಲಾಶಿಕ್ಷಣ	:	ಗದಗಿನ ವಿಜಯ ಕಲಾ ಮಂದಿರದಲ್ಲಿ ದಿ.ಶ್ರೀ.ಟಿ.ಪಿ.ಅಕ್ಕಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ಉಚ್ಚ ಕಲಾ ಶಿಕ್ಷಣಾರ್ಜನೆ. ಅಂದಿನ ಮುಂಬಯಿ ಪ್ರಾಂತದ ಎಲಿಮೆಂಟರಿ ಪೈಂಟಿಂಗ್‌ನಲ್ಲಿ ದ್ವಿತೀಯ ರ್‍ಯಾಂಕಿನಲ್ಲೂ ಇಂಟರ್ ಮೀಡಿಯೆಟ್ ಪೈಂಟಿಂಗ್ ಹಾಗೂ ಅಡ್ವಾನ್ಸ್ ಪೈಂಟಿಂಗ್‌ನಲ್ಲಿ ತೃತೀಯ ರ್‍ಯಾಂಕಿನಲ್ಲೂ ಉತ್ತೀರ್ಣ. • ೧೯೫೨ ರಲ್ಲಿ ಮುಂಬಯಿಯ ಸರ್.ಜೆ.ಜೆ.ಕಲಾ ಶಾಲೆಯಿಂದ ಗವರ್ನ್‌ಮೆಂಟ್ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣ. • ಕರ್ನಾಟಕ ಸರಕಾರದ ಮಾಡೆಲಿಂಗ್ ಪರೀಕ್ಷೆಯಲ್ಲಿ ಇಂಟರ್ ಮೀಡಿಯೆಟ್‌ನಲ್ಲಿ ಉತ್ತೀರ್ಣ.
ಸೇವೆ	:	೧೯೫೨ ರಿಂದ ೧೯೬೪ ರವರೆಗೆ ಗದಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲಾ ಶಿಕ್ಷಕ. • ೧೯೬೪ ರಿಂದ ೧೯೯೨ ರವರೆಗೆ, ಸಂಡೂರಿನ ವಸತಿ ಸಂಯುಕ್ತ ಕಿರಿಯ ಮಹಾವಿದ್ಯಾಲಯದಲ್ಲಿ ಕಲಾ ಶಿಕ್ಷಕನಾಗಿ ಸೇವೆ.

ಸಲ್ಲಿಸಿದ ವಿವಿಧ ಸೇವೆಗಳು :

- ೧೯೯೨ ರಲ್ಲಿ ನಿವೃತ್ತಿ ನಂತರ, ೧೯೯೭ ರವರೆಗೆ ಅದೇ ಶಾಲೆಯಲ್ಲಿ ಕಲಾ ಶಿಕ್ಷಕನಾಗಿ ಮುಂದುವರಿಕೆ. ಇದೇ ಅವಧಿಯಲ್ಲಿ ಕರ್ನಾಟಕ ಸರ್ಕಾರದ ಪಠ್ಯ ಪುಸ್ತಕಗಳ ಕಲಾವಿದ ಸದಸ್ಯ.
- ಕರ್ನಾಟಕ ಸರ್ಕಾರದ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಕೇಂದ್ರವು ಕೈಗೊಂಡ ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ನವೀಕರಣ ಕಾರ್ಯದಲ್ಲಿ ಕಲಾವಿದ ಹಾಗೂ ಸಂಪನ್ಮೂಲ ವ್ಯಕ್ತಿ.
- ಕರ್ನಾಟಕ ಸರ್ಕಾರದ ಅನೌಪಚಾರಿಕ ಶಿಕ್ಷಣದ ಪಠ್ಯಪುಸ್ತಕಗಳಿಗೆ ಕಲಾವಿದ ಮತ್ತು ಸಂಪನ್ಮೂಲ ವ್ಯಕ್ತಿ.
- ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಅವಕಾಶ ಎಂಬ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು ಕೈಗೊಂಡ ಕಾರ್ಯದಲ್ಲಿ ಕಲಾವಿದ ಮತ್ತು ಸಂಪನ್ಮೂಲ ವ್ಯಕ್ತಿ.
- ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಅವಕಾಶ ಯೋಜನೆಯ ಕಾರ್ಯಚರಣೆಗಾಗಿ ಕರ್ನಾಟಕ ಸರ್ಕಾರವು ನೇಮಿಸಿದ ಸಲಹಾ ಸಮಿತಿಯ ಸದಸ್ಯ.
